# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 223 Issue: 223 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 09.03.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



Good Opportunity for Branding

1,20,000+

Digital E-PAPER READERS



No.1 HAMPI TIMES LEADING PRINT & DIGITAL District News Paper

Call Us for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


Call Us for Advertisements
Good Opportunity for Branding

ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುವವರು

ಇಂದೇ ಸಂಪರ್ಕಿಸಿ

M:9448633038

ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಆನಂದ ಬಾಣ

ಸ್ತ್ರೀ ಶಕ್ತಿ



# ತ್ಯಾಗಕ್ಕೆ ಮತ್ತೊಂದು ಹೆಸರೇ ಸ್ತ್ರೀ

## ಲೇಖಕ ಡಾ. ಸತ್ಯಾನಂದ ಪಾತ್ರೋಟ ಹೇಳಿಕೆ | ಪಿಡಿಐಟಿ ಮತ್ತು ವಿಜಯನಗರ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ





■ ಹಂಪಿ ಟೈಮ್ಸ್ ಹೊಸಪೇಟೆ

ತಾಯಿಯಾಗಿ, ಹೆಂಡತಿಯಾಗಿ, ಸಹೋದರಿಯಾಗಿ, ಕುಟುಂಬದ ಹಲವಾರು ಜವಾಬ್ದಾರಿಯನ್ನು ಹೊತ್ತು, ಸಮಾಜದಲ್ಲೂ ಉನ್ನತ ಸ್ಥಾನವನ್ನು ಅಲಂಕರಿಸಿ ದಶಾವತಾರಕ್ಕೂ ಹೆಚ್ಚು ಬಗೆಯ ರೂಪದಲ್ಲಿ ತನ್ನ ಪರಿವಾರದ ಉನ್ನತಿಗೆ ಕಾರ್ಯನಿರ್ವಹಿಸುತ್ತಾಳೆ. ಇಂತಹ ತಾಯಿಯ ಋಣವನ್ನು ತೀರಿಸಲು ಅಸಾಧ್ಯ. ತ್ಯಾಗಕ್ಕೆ ಮತ್ತೊಂದು ಹೆಸರೇ ಸ್ತ್ರೀ ಎಂದು ಬಾಗಲ ಕೋಟೆಯ ಲೇಖಕ ಡಾ.ಸತ್ಯಾನಂದ ಪಾತ್ರೋಟ ಅಭಿಪ್ರಾಯಪಟ್ಟರು.

ನಗರದ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಪ್ರೌಢದೇವರಾಯ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಜರುಗಿದ ಪಿಡಿಐಟಿ ಪರಿವಾರ ಮಿಲನ ಹಾಗೂ ಮಹಿಳಾ ದಿನಾಚರಣೆಯಲ್ಲಿ ಭಾಗವಹಿಸಿ ಶನಿವಾರ ಮಾತನಾಡಿದರು. ಪ್ರೀತಿಗೆ ಜಗತ್ತಿನಲ್ಲಿ ದೊಡ್ಡ ಶಕ್ತಿಯಿದೆ. ಗಂಡು ಹೆಣ್ಣು ಬೇಧಭಾವವಿಲ್ಲದೆ ಸಹಬಾಳ್ವೆ ಸಾಮರಸ್ಯ ಸೌಹಾರ್ದತೆಯಿಂದ ಜೀವನ ನಡೆಸಬೇಕು. ಹಲವಾರು ವೇಷ, ಭಾಷೆ, ಸಂಸ್ಕೃತಿಗಳಲ್ಲಿ ಏಕತೆ ಹೊಂದಿದ ಬಹುತ್ವ ಭಾರತದ ಪರಿಕಲ್ಪನೆಯಿಂದ ಅಂತರಂಗದ ಸೌಂದರ್ಯವನ್ನು ಬೆಳೆಸಿಕೊಳ್ಳಬೇಕು. ಕಾಯಕ, ಪ್ರಸಾದ, ಅಕ್ಷರ ದಾಸೋಹ ನೀಡುವ ಪ್ರಾಧ್ಯಾಪಕ ವೃತ್ತಿ ಮಹೋನ್ನತವಾದದ್ದು ಅಂತಹ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿವರ್ಗದವರ ಸೇವೆಯನ್ನು ಗುರುತಿಸಿ ಈ ಸಂದರ್ಭದಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಅಂತರರಾಷ್ಟ್ರೀಯ ತರಬೇತುದಾರ ಚೇತನ್ ರಾಮ್ ಮಾತನಾಡಿ, ಎಣ್ಣೆಯ ಬತ್ತಿ ದೀಪವು ಒಂದು ದೀಪದಿಂದ ಇನ್ನೊಂದು ದೀಪವನ್ನು ಬೆಳಗಿಸುತ್ತದೆ ಆದರಂತೆ ಅಧ್ಯಾಪಕರು ಮಕ್ಕಳನ್ನು ಬೆಳೆಸಬೇಕು ಹಾಗೂ ಅವರಿಗೆ ಪರೀಕ್ಷೆಯ ಭಯವನ್ನು ಹೋಗಲಾಡಿಸಿ ಆತ್ಮಸ್ಥೈರ್ಯವನ್ನು ತುಂಬಬೇಕು, ಮಕ್ಕಳಲ್ಲಿ ಇಚ್ಚಾಶಕ್ತಿ, ಕೌಶಲ್ಯ ಮನೋಭಾವ, ಕ್ರಿಯಾಶೀಲತೆ ಬೆಳಸಿ ಅವರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶಿಕ್ಷಕರು ಮುಂದಾಗಬೇಕು ಹಾಗೂ ಮಕ್ಕಳಿಗೆ ಪರೀಕ್ಷೆ ಯುದ್ಧವಲ್ಲ ಹಬ್ಬವಾಗಬೇಕು ಎಂದು ಹೇಳಿದರು.

**ಪಿಡಿಐಟಿ ಕಾಲೇಜ್‌ಗೆ ನ್ಯಾಕ್ ಬಿ ಪ್ಲಸ್ ಮಾನ್ಯತೆ**

ಹಂಸಾಬ ಶಾರದಾಂಬ ಆಶ್ರಮದ ಪ್ರಭೋದಾ ಮಯಿ ಮಾತಾಜಿ ಮಾತನಾಡಿ, ಹೆಣ್ಣು ವಿಶೇಷತೆಯ ಹಾಗೂ ಗಂಡು ಸಾಮರ್ಥ್ಯದ ಸ್ವರೂಪ, ಇಂತಹ ಸೃಷ್ಟಿಯಲ್ಲಿ ಗಂಡು ಹೆಣ್ಣು ತನ್ನ ಜವಾಬ್ದಾರಿಯನ್ನು ಅರಿತು ಸದ್ವಿಚಾರ, ಸತ್ ಚಿಂತನೆ, ಸದ್ಭಾವನೆ ಸತ್ಕಾರ್ಯಗಳಿಂದ ಮುನ್ನಡೆದರೆ ಬದುಕು ಬೆಳಕಾಗುತ್ತದೆ ಎಂದರು.

ಪಿ.ಡಿ.ಐ.ಟಿ.ಯ ಆಡಳಿತ ಮಂಡಳಿ ಅಧ್ಯಕ್ಷ ಕರಿಬಸವರಾಜ ಬಾದಾಮಿ ಅವರು ಕಾಲೇಜ್‌ಗೆ ಲಭಿಸಿದ ನ್ಯಾಕ್ ಬಿ+ ಮಾನ್ಯತೆಯಂಗವಾಗಿ ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರಗಳನ್ನು ನೀಡಿ ಗೌರವಿಸಿ ಮಾತನಾಡಿದರು. ಸಂಗೀತ ವಿದ್ವಾನ್ ವೀರಪ್ಪ ಮತ್ತು ಸಂಗಡಿಗರಿಂದ ಸುಗಮ ಸಂಗೀತ ಕಾರ್ಯಕ್ರಮಗಳು ಜರುಗಿದವು.

ಪಿ.ಡಿ.ಐ.ಟಿ.ಯ ಆಡಳಿತ ಮಂಡಳಿಯ ಸದಸ್ಯರಾದ ಸಂಗನಬಸಪ್ಪ, ಗುರುಬಸವರಾಜ, ಚಂದ್ರಮೌಳಿ, ಅನಿಲ್ ಜವಳಿ, ಪ್ರಾಂಶು ಪಾಲ ಡಾ.ಯು.ಎಂ.ರೋಹಿತ್, ಉಪಪ್ರಾಂಶುಪಾಲರಾದ ಡಾ. ಪಾರ್ವತಿ ಕಡ್ಲಿ, ಐಕ್ಯೂಎಸಿಯ ಸಂಚಾಲಕರಾದ ಡಾ.ಶಿವಕೇಶವ್ ಕುಮಾರ್, ಡೀನ್ ಡಾ. ಮಂಜುಳಾ ಎಸ್.ಡಿ, ಮಹಿಳಾ ಸಬಲಿಕರಣ ಕೋಶದ ಸಂಚಾಲಕರಾದ ಡಾ.ಶರಣಬಸಮ್ಮ, ಕಾಲೇಜಿನ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿ ಭಾಗಿಯಾದರು. ಪ್ರೊ. ರವಿಕುಮಾರ್, ಪ್ರೊ. ಇಂದಿರಾ, ಪ್ರೊ. ವೀಣಾ, ಪ್ರೊ. ಉಷಾ ಗುಜ್ಜಲ್ ನಿರ್ವಹಿಸಿದರು.

# ಸಕಲ ಕ್ಷೇತ್ರದಲ್ಲೂ ಸದೃಢರಾಗಿ

## ಸಮಾಜ ಸೇವಕಿ ರಾಣಿ ಸಂಯುಕ್ತ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಮಹಿಳೆಯರು ಸಾಮಾಜಿಕ, ಮಾನಸಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಹಾಗೂ ಆಧ್ಯಾತ್ಮಿಕವಾಗಿಯೂ ಸದೃಢರಾಗಬೇಕು ಎಂದು ಸಮಾಜ ಸೇವಕಿ ರಾಣಿ ಸಂಯುಕ್ತ ವಿದ್ಯಾರ್ಥಿನಿಯರಿಗೆ ಕರೆ ನೀಡಿದರು.

ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಚರಣೆ ಉದ್ಘಾಟಿಸಿ ಶನಿವಾರ ಮಾತನಾಡಿದರು. ಇರುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಾವಲಂಬಿಯಾಗಿ ಬೆಳೆಯಬೇಕು. ಇದೇ ಕಾಲೇಜಿನ ವಿದ್ಯಾರ್ಥಿಯಾಗಿರುವ ನಾನು ಯಾವುದೇ ಸಂದರ್ಭದಲ್ಲೂ ಸಹಕಾರ ನೀಡಲು ಬದ್ಧ ಎಂದರು.

ಕಾಲೇಜ್ ಅಧ್ಯಕ್ಷ ಎನ್. ಮಲ್ಲಿಕಾರ್ಜುನ ಮೆಟ್ರಿ, ಪ್ರಾಂಶುಪಾಲರಾದ ಡಾ. ಎಂ ಪ್ರಭುಗೌಡ, ಕೆ.ಮಲ್ಲಿಕಾರ್ಜುನಗೌಡ. ಉಪನ್ಯಾಸಕಿ ಬಿ. ಎಸ್ ಹೂವಕ್ಕ ಉಪಸ್ಥಿತರಿದ್ದರು. ವಿಜ್ಞಾನ ಕ್ಷೇತ್ರದಲ್ಲಿ ಸಾಧನೆಗೈದ ಕೀರ್ತನ ಎಂ. ಆರ್, ಹರಿಣಿ, ಕಲಾವಿಭಾಗದಲ್ಲಿ ಮೂವರು ಅಂಧ ವಿದ್ಯಾರ್ಥಿನಿಯರಿಗೆ, ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಎಂ ಶಾಶವಲಿ. ಆಂಗ್ಲ ಸ್ನಾತಕೋತ್ತರ ಪದವಿಯಲ್ಲಿ ಓದುತ್ತಿರುವಾಗಲೇ ಕೆ –ಸೆಟ್ ಪಾಸಾದ ಕುಮಾರ ಕಣರ್ಂ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ ತಯಾರಿಗೆ ವಿದ್ಯಾರ್ಥಿಗಳಿಗಾಗಿ

# ಇಂದು ಗೂಗಲ್ ಮೀಟ್, ನಾಳೆ ಜಿ-625 ತರಬೇತಿ

## ಬಿಇಒ ಎಂ.ಚನ್ನಬಸಪ್ಪ ಹೇಳಿಕೆ | ಮಕ್ಕಳಲ್ಲಿ ಹೆಚ್ಚಿದ ಆತ್ಮವಿಶ್ವಾಸ | ಸಿದ್ಧತೆ ಹಾಗೂ ಸಮಯಪಾಲನೆ

■ ಹಂಪಿ ಟೈಮ್ಸ್ ಹೊಸಪೇಟೆ



ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೀಗೆ ಕೊನೆ ಹಂತದ ತಯಾರಿಗಾಗಿ ಮಾ.9 ರಂದು ಬೆಳಿಗ್ಗೆ 11ಕ್ಕೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಗೂಗಲ್ ಮಿಟ್ ಹಮ್ಮಿಕೊಳ್ಳಲಾಗಿದೆ ಹಾಗೇಯೆ ಮಾ.10 ರಂದು ಬೆಳಿಗ್ಗೆ 10 ರಿಂದ ಹೊಸಪೇಟೆಯ ಮಹಿಳಾ ಸಮಾಜ ಪ್ರೌಢ ಶಾಲೆಯಲ್ಲಿ ಜಿ–625ಗೆ ಆಯ್ಕೆಯಾದ ಆಯ್ದ ವಿದ್ಯಾರ್ಥಿಗಳಿಗೆ ಗ್ಯಾರಂಟಿ 625 ಪ್ಲಾನ್ ಕುರಿತು ವಿಶೇಷ ತರಬೇತಿಯನ್ನು ಆಯೋಜಿಸಲಾಗಿದೆ ಎಂದು ಹೊಸಪೇಟೆ ಕ್ಷೇತ್ರಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ದಿನಗಣನೆ ಆರಂಭವಾಗಿದೆ. ಶಿಕ್ಷಕರು ವಿಶೇಷವಾಗಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅಂತಿಮ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಈ ಬಾರಿ ಫಲಿತಾಂಶ ನಮ್ಮದೆ ಎಂಬ ಆತ್ಮವಿಶ್ವಾಸವೂ ಮಕ್ಕಳಲ್ಲಿ ದೃಢವಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರಶಿಕ್ಷಣಾಧಿಕಾರಿ ಕಾರ್ಯಾಲಯ ಹೊಸಪೇಟೆ ಮತ್ತು ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದಲ್ಲಿ ಈಗಾಗಲೇ ಫೋನ್ ಇನ್ ಕಾರ್ಯಕ್ರಮ, ವಿಷನ್–625 ಕಾರ್ಯಗಾರದಿಂದ ಮಕ್ಕಳಲ್ಲಿ ಹೊಸಚೈತನ್ಯ ಮೂಡಿದ್ದು ವಿದ್ಯಾರ್ಥಿಗಳು ಪರಿಣಾಮಕಾರಿ ಅಭ್ಯಾಸದಲ್ಲಿ ತೊಡಗಿದ್ದಾರೆ.




ವಿದ್ಯಾರ್ಥಿಗಳು ಗೂಗಲ್ ಮೀಟ್‌ನಲ್ಲಿ ಪಾಲ್ಗೊಂಡು ಶಿಕ್ಷಕರು ಪರೀಕ್ಷೆ ಫಲಿತಾಂಶ ಸುಧಾರಣೆಗೆ ನೀಡುವ ಸಲಹೆಗಳನ್ನು ಅನುಸರಿಸಬೇಕು. ವಿದ್ಯಾರ್ಥಿಗಳು ಪರೀಕ್ಷೆ ಕುರಿತು ಏನಾದರೂ ಕೇಳಬೇಕೆನಿಸಿದಲ್ಲಿ ಕೇಳಿ ಸಮಸ್ಯೆಗಳಿಗೆ ಪರಿಹಾರಕಂಡುಕೊಳ್ಳಬಹುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಬೆಳಿಗ್ಗೆ ಮತ್ತು ಸಂಜೆ ವಿಶೇಷ ತರಗತಿ ಮೂಲಕ ಪರೀಕ್ಷೆಯ ಕುರಿತು ಅರಿವು ಹಾಗೂ ಉತ್ತೀರ್ಣರಾಗುವುದರಿಂದಾಗುವ ಪ್ರಯೋಜನಗಳ ಕುರಿತು ಮನವರಿಕೆ ಮಾಡಿಕೊಡಲಾಗಿದೆ. ಪಾಲಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಪರೀಕ್ಷೆಗಳ ಸಮಯದಲ್ಲಿ ಮಕ್ಕಳ ಆರೋಗ್ಯ ಮತ್ತು ಶಿಕ್ಷಣದತ್ತ ಹೆಚ್ಚಿನ ಕಾಳಜಿವಹಿಸಬೇಕು ಎಂದು ತಿಳಿಸಿದ್ದಾರೆ.

# ಮಹಿಳೆಯರ ಏಳ್ಗೆಗೆ ಸಮಾನ ಅವಕಾಶ ಅಗತ್ಯ

## ಶಾಸಕ ಹೆಚ್.ಆರ್.ಗವಿಯಪ್ಪ ಅಭಿಮತ | ಸೂಕ್ತ ರಕ್ಷಣೆ ನೀಡುವುದು ಎಲ್ಲರ ಕರ್ತವ್ಯ



■ ಹಂಪಿ ಟೈಮ್ಸ್ ಹೊಸಪೇಟೆ

ಮಹಿಳೆಯರ ಏಳ್ಗೆಗೆ ಸಮಾಜದಲ್ಲಿ ಸಹಬಾಳ್ವೆ ಸಮಾನ ಗೌರವ ಮತ್ತು ಸಮಾನ ನ್ಯಾಯ ನೀಡಬೇಕಾದ ಅಗತ್ಯವಿದೆ ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಹೊಸಪೇಟೆ ನಗರದಲ್ಲಿ ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯುಕೇಷನ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ಬೈಕ್ ರ್ಯಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶನಿವಾರ ಮಾತನಾಡಿದರು, ಮಹಿಳೆಯರ ಸಬಲೀಕರಣಕ್ಕೆ ರಾಜ್ಯ ಸರ್ಕಾರ ಬದ್ಧವಿದೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಸಾಧಿಸಲು ಪುರುಷ ಸಮಾಜದ ಸಹಕಾರ, ಪ್ರೋತ್ಸಾಹ ಅಗತ್ಯ. ಈಗಾಗಲೇ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದೆ ಇದ್ದಾರೆ. ಆಟೋ ಓಡಿಸುವುರಿಂದ ಹಿಡಿದು ಪೈಲೆಟ್ ವರೆಗೂ, ಗ್ರಾಪಂ ಸದಸ್ಯರಿಂದ ರಾಷ್ಟ್ರಪತಿಯವರಿಗೂ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಮುಂದೆ ಇದ್ದಾರೆ. ರಾಜಕೀಯ ಮತ್ತು ಅರ್ಥಿಕ ಕ್ಷೇತ್ರದಲ್ಲಿ ಮುಖ್ಯವಾಹಿನಿಗೆ ಬರಲು ಇನ್ನಷ್ಟು ಅವಕಾಶಗಳನ್ನು ಒದಗಿಸಬೇಕಿದೆ. ಮಹಿಳೆಯರಿಗೆ ಸೂಕ್ತ ರಕ್ಷಣೆ ಕಲ್ಪಿಸುವುದು ನಮ್ಮ ಕರ್ತವ್ಯವಾಗಬೇಕು. ಪ್ರತಿಯೊಬ್ಬರು ಕಡ್ಡಾಯವಾಗಿ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ನಿಯಾಜಿ ಮಾತನಾಡಿ, ಸರ್ಕಾರ ಮಹಿಳೆಯರ ಶ್ರೇಯೋಭಿವೃದ್ಧಿಗೆ ಆದ್ಯತೆ ನೀಡಿ ಗೃಹಲಕ್ಷ್ಮಿ, ಶಕ್ತಿ ಯೋಜನೆ, ಅನ್ನ ಭಾಗ್ಯ, ಗೃಹಜ್ಯೋತಿ ಮತ್ತು ಯುವನಿಧಿ ಯೋಜನೆಗಳನ್ನು ಅನುಷ್ಟಾನಕ್ಕೆ ತರಲಾಗಿದೆ. ಮಹಿಳೆಯರನ್ನು ಹೆಚ್ಚು ಗೌರವಿಸುವ ಸರ್ಕಾರ ಇದಾಗಿದೆ ಎಂದರು.

ಬಳಿಕ ನಗರದ ಡಾ.ಪುನಿತ್ ರಾಜ್ ಕುಮಾರ್ ಜಿಲ್ಲಾ ಕ್ರೀಡಾಂಗಣದಿಂದ ಹಂಪಿಯ ಮಹಾನವಮಿ ದಿಬ್ಬದವರೆಗೂ ಬೈಕ್ ರ್ಯಾಲಿಯನ್ನು ನಡೆಸಲಾಯಿತು.

ರ್ಯಾಲಿಯಲ್ಲಿ ಭಾರತ ಮಾತೆ, >>2




# ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಮಯದ ನಿರ್ವಹಣೆ

■ ಅನುಶಾ ಜೋಷಿ, ಕೊಪ್ಪಳ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಮಯವಿದು ವಿದ್ಯಾರ್ಥಿಗಳು ತಮ್ಮ ತಮ್ಮ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಆದರೆ ಮಕ್ಕಳಿಗಿಂತ ಅವರ ಪಾಲಕರಲ್ಲಿ ಭಯ ಮತ್ತು ಆತಂಕ ಎದುರಾಗುವ ಸಮಯವಿದು. ಪಾಲಕರು ಮಕ್ಕಳ ಅಂಕಗಳಿಗಿಂತ ತಮ್ಮ ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕು. ಮಕ್ಕಳು ಅವರ ತಮ್ಮ ತಮ್ಮ ವಿಷಯಗಳಲ್ಲಿ ಸಂಪೂರ್ಣವಾಗಿ ಪರಿಣಿತಿ ಹೊಂದಿರುತ್ತಾರೆ ಮತ್ತು ಅಭ್ಯಾಸ ಮಾಡಿರುತ್ತಾರೆ. ನೀವು ಅವರಿಗೆ ಬೆನ್ನೆಲುಬಾಗಿ ನಿಂತು ಭರವಸೆ ನೀಡಿ, ಮಿಕ್ಕಿದ್ದೆಲ್ಲ ಮಕ್ಕಳೇ ನೋಡಿಕೊಳ್ಳುತ್ತಾರೆ.

ಇನ್ನು ಪರೀಕ್ಷಾ ಸಮಯ ಎಂದಾಕ್ಷಣ ಮಕ್ಕಳೇ ಗಾಬರಿ ಬಿಡಿ ಸಂಪೂರ್ಣ ಸಮಯವನ್ನು ನಿಮ್ಮ ಪಠ್ಯದ ಅನುಸಾರವಾಗಿ ವಿಭಾಗಿಸಿ ಮತ್ತು ಆ ಸಮಯವನ್ನು ಪಾಲನೆ ಮಾಡಿ ಇದರಿಂದ ಸಮಯದ ಸದುಪಯೋಗ ಆಗುತ್ತದೆ ಹಾಗಾದರೆ ಪರೀಕ್ಷೆಯಲ್ಲಿ ಸಮಯ ಪಾಲನೆ ಹೇಗಿರಬೇಕು. ಮಕ್ಕಳೇ ಮೊದಲನೇ ನಿಮಗೆ ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳು ದೊರೆತಿರುತ್ತವೆ. ಅದನ್ನು ಅನುಸರಿಸಿ ಮತ್ತು ಆಧಾರವನ್ನಾಗಿಸಿ ಅಂಕಗಳ ಆಧಾರದ ಮೇಲೆ ನಿಮ್ಮ ಉತ್ತರವನ್ನು ನಿಗದಿಪಡಿಸಿಕೊಳ್ಳಿ. ಅವಶ್ಯವಿದ್ದಲ್ಲಿ ನಿಮ್ಮ ಗುರುಗಳ ಸಹಾಯ ಪಡೆಯಿರಿ. ಕಡಿಮೆ ಅಂಕಗಳ ಪ್ರಶ್ನೆಗಳಿಗೆ ಹೆಚ್ಚು ಸಮಯವನ್ನು ಕೊಡುವುದು ಬೇಡ, ಅದೇ ರೀತಿ ಯಾವುದೇ ಕಠಿಣ ಪ್ರಶ್ನೆಗಳಿಗೆ ಉತ್ತರಿಸಲು ಹೋಗಿ ಗಾಬರಿಯಾಗಿ ನಿಮ್ಮ ಆತ್ಮವಿಶ್ವಾಸವನ್ನು ಕುಗ್ಗಿಸಿಕೊಳ್ಳಬೇಡಿ. ಪ್ರತಿಯೊಂದು ಪ್ರಶ್ನೆಗೂ ಅಂಕಗಳ ಆಧಾರದ ಮೇಲೆ ಸಮಯವನ್ನು ನಿರ್ಧರಿಸಿ ಬರೆಯಲು ಮುಂದಾಗಿ ಆದರೆ ನೆನಪಿನಲ್ಲಿರಲಿ ನಿಮ್ಮ ಉತ್ತರ ಪತ್ರಿಕೆ ಹೇಗೆ ಮೌಲ್ಯಮಾಪನವಾಗುತ್ತದೆ ಎಂದರೆ ಮೊದಲನೇ ಉತ್ತರದಲ್ಲಿ ನೀವು ಉತ್ತರಿಸುವ ಶೈಲಿ ಮತ್ತು ಆಳ ತಿಳಿದುಬಿಡುತ್ತದೆ. ಆದ್ದರಿಂದ ಸಂಪೂರ್ಣವಾಗಿ ತಿಳಿದಿರುವ ಉತ್ತರವನ್ನು ಮೊದಲು ಬರೆಯಿರಿ ಆ ಉತ್ತರದಲ್ಲಿ ನಿದರ್ಶನಗಳನ್ನು ಸಾಮಾನ್ಯವಾಗಿ ಇರಿಸಿ, ಇದು ಕಡಿಮೆ ಸಮಯದಲ್ಲಿ ಹೆಚ್ಚು ಪುಷ್ಟಿದಾಯಕವಾದ ಉತ್ತರವನ್ನು ನೀವು ನೀಡಬಲ್ಲಿರಿ. ಪಠ್ಯದ ಭಾಷೆಯಲ್ಲಿಯೇ ಉತ್ತರಿಸುವ ಅವಶ್ಯಕತೆ ಇರುವುದಿಲ್ಲ. ನೀವು ನಿಮ್ಮ ಸ್ವಂತ ವಾಕ್ಯದಲ್ಲಿ ಉತ್ತಸಬಹುದು. ಇದು ಉತ್ತರವನ್ನು ನೆನಪಿಸಿಕೊಂಡು ಬರೆಯುವ ಸಮಯವನ್ನು ಉಳಿಸುತ್ತದೆ ಹಾಗೆಯೇ ನೀವು ಉತ್ತರವನ್ನು ಕಡಿಮೆ ಸಮಯದಲ್ಲಿ ಬರೆಯಬಹುದು.

ಹಾಗೆಯೇ ಗಣಿತ ಮತ್ತು ವಿಜ್ಞಾನದ ಸೂತ್ರಗಳನ್ನು ಮೊದಲಿನಿಂದಲೇ ಅಭ್ಯಾಸಿಸಿಕೊಳ್ಳಿ. ಅದು ಕೂಡ ಸಮಯದ ಮಿತಿಯಿಂದಿರಲಿ. ಹೀಗೆ ಪ್ರತಿಯೊಂದು ಪ್ರಶ್ನೆಗೂ ಸರಿಯಾದ ಸಮಯವನ್ನು ಗುರುತಿಸಿಕೊಳ್ಳಿ ಅಥವಾ ನಿಗದಿಸಿಕೊಳ್ಳಿ. ಇನ್ನು ಪರೀಕ್ಷೆಯಲ್ಲಿ ಮೊದಲು ಪ್ರಶ್ನೆ ಪತ್ರಿಕೆಯನ್ನು ಚೆನ್ನಾಗಿ ಓದಿ ಬಾರದಿರುವ ಪ್ರಶ್ನೆಗಳ ಚಿಂತೆ ಬಿಟ್ಟು ಚೆನ್ನಾಗಿ ಬಿಡಿಸಬಹುದಾದ ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಂಡು ಉತ್ತರಿಸಿ. ಇದು ನಿಮ್ಮ ಮೇಲಿನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಹಾಗೆ ಮುಂದೆ ಚೆನ್ನಾಗಿ ಎಲ್ಲಾ ಪ್ರಶ್ನೆಗಳಿಗೆ ನೀವು ಉತ್ತರಿಸಬಲ್ಲಿರಿ. ಹಾಗೆಯೇ ಅನುಮಾನಾಸ್ಪದ ಪ್ರಶ್ನೆಗಳಿಗೆ ಉತ್ತರಿಸುವುದು ಬೇಡ. ಮೊದಲೇ ತಿಳಿಸಿದ ಹಾಗೆ ಮೌಲ್ಯಮಾಪನ ಮಾಡುವವರಲ್ಲಿ ನಿಮ್ಮ ಮೊದಲನೇ ಉತ್ತರ ಭರವಸೆಯನ್ನು ನೀಡುತ್ತದೆ. ತದನಂತರ ಉಳಿದ ಪ್ರಶ್ನೆಗಳನ್ನು ಸರಳೀಕರಿಸಿ ಬರೆಯಿರಿ ಮತ್ತು ಸಂಪೂರ್ಣ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ. ನೀವು ಓದಿರುವ ಪಠ್ಯದಿಂದಲೇ ಪ್ರಶ್ನೆಗಳನ್ನು ಕೇಳುವುದರಿಂದ ಚಿಂತಿಸುವ ಅಗತ್ಯವೂ ಇಲ್ಲ. ನನ್ನ ಪರೀಕ್ಷೆ ನನ್ನ ಸಂಭ್ರಮ ಎನ್ನುವ ನಿಟ್ಟಿನಲ್ಲಿ ಪರೀಕ್ಷೆಗೆ ಸಿದ್ಧರಾಗಿ ಸಂಭ್ರಮಿಸಿ.ಶುಭವಾಗಲಿ.

ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ ಕೋರುವ ಮೂಲಕ ನಿಮ್ಮೂರಿನ ಉತ್ಸವ ವೈಶಿಷ್ಟ್ಯವನ್ನು ಯುವಜನತೆಗೆ ತಿಳಿಸಲು ಬಯಸುತ್ತೀರಾ?

ಸಂಪರ್ಕಿಸಿ ಮೊ: 9448633038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ... ಒಂದು ವಿಭಿನ್ನ ನೋಟ

# ಹೆಣ್ಣಿಗೆ ಬೇಕಾಗಿರುವುದು ಆರಾಧನೆಯಲ್ಲ...



ಹೆಣ್ಣಲ್ಲವೇ ನಮ್ಮನೆಲ್ಲ ಹಡೆದ ತಾಯಿ ಹೆಣ್ಣಲ್ಲವೇ ನಮ್ಮನೆಲ್ಲ ಪೊರೆದವಳು.... ಹೆಣ್ಣು ಹೆಣ್ಣೆಂದೇತಕ್ಕೆ ಬೀಳುಗೈವರು ಕಣ್ಣು ಕಾಣದ ಗಾವಿಲರು ಎಂದು ಸಂಚಿಯ ಹೊನ್ನಮ್ಮ ತನ್ನ ಹದಿಬದೆಯ ಧರ್ಮ ಎಂಬ ಕೃತಿಯಲ್ಲಿ ಬರೆದಿದ್ದಾಳೆ.

ನಿಜ ಹೆಣ್ಣು ನಮ್ಮನ್ನೆಲ್ಲ ಹಡೆದ ತಾಯಿ, ಭೂಮಿ ತೂಕದ ಸಹನೆಯನ್ನು ಹೊಂದಿರುವ ಸಹನಶೀಲೆ, ಮನದಲ್ಲಿ ಜ್ವಾಲಾಮುಖಿ ಯಷ್ಟು ನೋವುಗಳು ಇದ್ದರೂ ಕೂಡ ಹೊರಗೆ ನಸು ನಗುವ ಸುಹಾಸಿನಿ, ಗಂಡ ನೂರೊಂದು ತಪ್ಪು ಮಾಡಿದರೂ ಕ್ಷಮಿಸುವ ಕ್ಷಮಯಾಧರಿತ್ರಿ, ಮನೆಯ ಮತ್ತು ಹೊರಗಿನ ಹತ್ತು ಹಲವು ಕೆಲಸಗಳನ್ನು ಮಾಡುವ ಕಾರ್ಯೇಷು ದಾಸಿ, ತನ್ನ ಕೈಯಲ್ಲಿ ಬಿಡಿಗಾಸನ್ನು ಉಳಿಸಿಕೊಳ್ಳದಿದ್ದರೂ ಮನೆಯ ಎಲ್ಲಾ ಚಿಕ್ಕ ಪುಟ್ಟ ಆಯವ್ಯಯಗಳನ್ನು ನಿಭಾಯಿಸಿಕೊಂಡು ಹೋಗುವ ಕರಣೇಶು ಮಂತ್ರಿ, ತನ್ನ ಹೊಟ್ಟೆ ಹಸಿದಿದ್ದರೂ ಕೂಡ ಹಸಿವಿನ ಸಂಕಟದಿಂದ ತಲೆ ತಿರುಗುತ್ತಿದ್ದರೂ ಕೂಡ ಕುಟುಂಬದ ಎಲ್ಲ ಸದಸ್ಯರಿಗೂ, ಅತಿಥಿ, ಅಭ್ಯಾಗತರಿಗೂ ಉಣ ಬಡಿಸುವ ಭೋಜ್ಯೇಶು ಮಾತಾ, ಮನಸ್ಸು ಅದೆಷ್ಟೇ ನೋವಿನಲ್ಲಿ ಅದ್ದಿ ತೆಗೆದಂತಿದ್ದರೂ ಸುಂದರವಾಗಿ ಅಲಂಕರಿಸಿಕೊಂಡು ನೋಡುವವರ ಕಣ್ಣಿಗೆ ತಂಪನ್ನೆರೆಯುವ ರೂಪೇಶು ಲಕ್ಷ್ಮಿ. ಹೌದು ಈ ಎಲ್ಲವೂ ಹೆಣ್ಣಿನ ಗುಣಗಳು ನಿಜ..... ಆದರೆ ಜಗತ್ತಿನ ಇತರ ಜನರ ದೃಷ್ಟಿಯಲ್ಲಿ ಮಾತ್ರ. ಖುದ್ದು ಆಕೆ ಏನು ಎಂಬುದರ ಅರಿವು ಆಕೆಗೆ ಇದ್ದಿದ್ದರೆ ಈ ಜಗತ್ತು ಈಗ ಇರುವಷ್ಟು ಆರಾಮವಾಗಿ ಇರುತ್ತಿರಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯ.

ತಮ್ಮೆಲ್ಲ ಅನುಕೂಲತೆಗಳಿಗಾಗಿ ಹೆಣ್ಣು ಮಕ್ಕಳ ಮೇಲೆ ಅನಾದಿಕಾಲ ದಿಂದಲೂ ಈ ಎಲ್ಲಾ ಉಪಾಧಿಗಳನ್ನು ಹೇರಿ, ಆ ಎಲ್ಲವುಗಳನ್ನು ಆಕೆ ಅನೂಚಾನವಾಗಿ ನಡೆಸಿಕೊಂಡು ಬಂದರೆ ಮಾತ್ರ ಆಕೆ ಸದ್ಗೃಹಿಣಿ, ಗರತಿ ಸದಾಚಾರಿಣಿ, ಒಳ್ಳೆಯ ಮಹಿಳೆ ಎಂದೆನಿಸಿ ಕೊಳ್ಳುವಳು ಎಂಬ ಬೇಶರತ್ತಾದ ಅಗೋಚರ ಒತ್ತಾಯವನ್ನು ಸಾಮಾಜಿಕವಾಗಿ ಆಕೆಯ ಮೇಲೆ ಹೇರಿದ್ದು ನಮ್ಮ ಈ ಸಮಾಜವೇ. ಖಂಡಿತವಾಗಿಯೂ ಇದಾವುದೂ ತಪ್ಪಲ್ಲ..... ಈ ಎಲ್ಲವನ್ನು ಆಕೆ ಯಾವುದೇ ರೀತಿಯ ಬಲವಂತವಿಲ್ಲದೆ ಒಪ್ಪಿಕೊಂಡು ಬದುಕಿನಲ್ಲಿ ಅಪ್ಪಿಕೊಂಡರೆ ಅದನ್ನು ತಪ್ಪು ಎಂದು ಹೇಳುವ ದಾಷ್ಟಿಕತೆ ನನ್ನದಲ್ಲ. ಹೆಣ್ಣು ಮಗಳಾಗಿ ನಾನು ಕೂಡ ಈ ಎಲ್ಲಾ ಸಂಪ್ರದಾಯಗಳನ್ನು ಒಪ್ಪಿ ಅಪ್ಪಿಕೊಂಡಿರುವವಳು..... ಆದರೆ ನನ್ನ ಮನಸ್ಸಿಗೆ ಒಗ್ಗದ ಕೆಲ ವಿಚಾರಗಳನ್ನು ಬಹಳಷ್ಟು ಬಾರಿ ಸೌಮ್ಯವಾಗಿ, ಕೆಲವೊಮ್ಮೆ ನಿಷ್ಠುರವಾಗಿ ಮತ್ತೆ ಕೆಲವೊಮ್ಮೆ ಜೋರಾಗಿ ಕೂಗಿ ಹೇಳುವ ಅನಿವಾರ್ಯತೆ ಉಂಟಾದರೆ ಅದಕ್ಕೂ ಸಿದ್ಧ. ಶರಣರು ಹೇಳುವಂತೆ 'ಬೇಕಾದರೆ ಬೆರೆತು ನಡೆ ಬೇಡವಾದರೆ ಸರಿದು ನಡೆ' ಎಂಬಂತೆ ಹೆಣ್ಣು ಮಕ್ಕಳು ಬಿಡುಬೀಸಾಗಿ ತಮ್ಮ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲು ಸಾಧ್ಯವಾದರೆ ಅದಕ್ಕಿಂತ ಹೆಚ್ಚಿನದೇನೂ ಇಲ್ಲ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

21ನೇ ಶತಮಾನದ ಅಂಚಿಗೆ ಬಂದರೂ ಕೂಡ ಹೆಣ್ಣು ಮಕ್ಕಳ ಸ್ಥಾನಮಾನದಲ್ಲಿ, ಆರ್ಥಿಕ ಸ್ಥಿತಿಗತಿಗಳಲ್ಲಿ, ಸಾಮಾಜಿಕ ನೀತಿ ನಿಯಮಗಳಲ್ಲಿ ಕೇವಲ ಎರಡು ದಶಕಗಳಲ್ಲಿ ಅತಿ ಹೆಚ್ಚಿನ ಬದಲಾವಣೆಗಳನ್ನು ಕಂಡುಕೊಂಡಿರುವ ನಾವುಗಳು ಇನ್ನಾದರೂ ಹೆಣ್ಣು ಮಕ್ಕಳನ್ನು ನೋಡುವ ರೀತಿ ಬದಲಾಗಲೇಬೇಕು. ಆಕೆಯ ಪಾಲಕರಾಗಿ ಆಕೆಯ ಅಭ್ಯುದಯವನ್ನು ನಾವು ಬಯಸಿದರೂ ಕೂಡ ಆಕೆ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳಲು ಇಂದಿಗೂ ಹಿಂಜರಿಯಲು ಕಾರಣ ನಮ್ಮ ವಿಪರೀತ ಕಾಳಜಿ ಮುಂಜಾಗ್ರತೆಗಳು. ಆಕೆಯನ್ನು ಮುಚ್ಚಟೆಯಿಂದ ಬೆಳೆಸಿದರಷ್ಟೇ ಸಾಲದು, ಆಕೆಯ ಆಸೆ ಆಕಾಂಕ್ಷೆಗಳನ್ನು ಪೂರೈಸಿದರಷ್ಟೇ ಸಾಲದು ಬದಲಾಗಿ ಆಕೆಯನ್ನು ಓರ್ವ ಗಂಡು ಮಗನಿಗೆ ಕೊಡುವಷ್ಟೇ ಸ್ವತಂತ್ರವನ್ನು, ಆರ್ಥಿಕ ಸಾಮಾಜಿಕ ಹಕ್ಕು ಬಾಧ್ಯತೆಗಳನ್ನು, ಕರ್ತವ್ಯಗಳನ್ನು ಕೊಡಬೇಕು.

ನಮ್ಮ ದೇಶದ ಕಾನೂನಿನಲ್ಲಿ ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲಿದೆ, ಆದರೆ ಇಂದಿಗೂ ತನ್ನ ತಂದೆಯ ಆಸ್ತಿಯಲ್ಲಿ ಪಾಲನ್ನು ಬೇಡುವ ಹೆಣ್ಣು ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಥಿತಿ ನಮಗಿದೆಯೇ?

ನಿಜ, ತಂದೆ ತಾಯಿಯ ಜವಾಬ್ದಾರಿಯನ್ನು ಅವರ ಮುಪ್ಪಿನ ಕಾಲದಲ್ಲಿ ಹೆಣ್ಣು ಮಕ್ಕಳು ಹೊರಲಿಕ್ಕಿಲ್ಲ. ಆಕೆಯ ಪತಿಯ ಮನೆಯ ಪರಿಸ್ಥಿತಿಗಳಲ್ಲಿ ಆಕೆಗೆ ಅದು ಸಾಧ್ಯವಾಗಲಿಕ್ಕಿಲ್ಲ ಮಗನಷ್ಟೇ ಸರಿಸಮನಾಗಿ ಮಗಳಿಗೆ ಆಸ್ತಿಯನ್ನು ಕೊಡಲು ಸಾಧ್ಯವಾಗದೇ ಹೋದರೂ ಕೂಡ ತನ್ನದು ಎಂದು ಹೇಳಿಕೊಳ್ಳಲು ಹಕ್ಕಿನಿಂದ ಬಳಸಲು ಸಾಧ್ಯವಾಗುವಷ್ಟು ಆಸ್ತಿಯನ್ನು ಆಕೆ ಪಡೆದ ಮೇಲೂ ಕೂಡ ಆಕೆಯನ್ನು ಮೊದಲಿನಷ್ಟೇ ಪ್ರೀತಿ ಆದರಗಳಿಂದ ನೋಡಿಕೊಳ್ಳು ತ್ತೇವೆಯೇ? ಖಂಡಿತವಾಗಿಯೂ ಇಲ್ಲ. ಹೆಣ್ಣು ಮಕ್ಕಳಲ್ಲಿ ಪರಕೀಯ ಪ್ರಜ್ಞೆ ಹುಟ್ಟಿಸುವ ಇಂತಹ ಪಾಲಕರ, ಅಣ್ಣ ತಮ್ಮಂದಿರ ನಡೆಗಳು ಪ್ರಶ್ನಾರ್ಹವಾಗಿ ಉಳಿಯುವುದಿಲ್ಲವೇ?

ಹುಟ್ಟಿದ ಮನೆಯಲ್ಲಿ ಪ್ರೀತಿ ಮಮತೆಯಲ್ಲಿ ಬೆಳೆಯುವ ಹೆಣ್ಣು ಮಗಳು ಶೈಕ್ಷಣಿಕವಾಗಿ ಮುಂದುವರೆದು ತನ್ನ ಕಾಲ ಮೇಲೆ ತಾನು ನಿಂತರೂ ಕೂಡ ಮದುವೆಯಾದ ನಂತರ ಪತಿಯ ಮನೆಯವರು ಉದ್ಯೋಗ ಮಾಡುವುದು ಬೇಡ, ಮನೆ ಮಕ್ಕಳು ಕುಟುಂಬವನ್ನು ನೋಡಿಕೊಂಡು ಮನೆಯಲ್ಲಿಯೇ ಇರಲಿ ಎಂದಾಗ ಅದನ್ನು ಅನಿವಾರ್ಯವಾಗಿಯಾದರೂ ಒಪ್ಪುವ ಹೆಣ್ಣು ಮಕ್ಕಳು ನಮ್ಮಲ್ಲಿ ಇದ್ದಾರೆ.... ಆದರೆ ಇದೇ ಮಾತನ್ನು ಪುರುಷರಿಗೆ ಎಂದಾದರೂ ನಿನ್ನ ಪತ್ನಿ ಕೆಲಸ ಮಾಡಿಕೊಂಡಿರಲಿ ನೀನು ಮನೆ ಮತ್ತು ಮಕ್ಕಳನ್ನು ನೋಡಿಕೋ ಎಂದು ಹೇಳಿದ್ದಾರೆಯೇ? ಹಾಗೆ ಮನೆ ಮತ್ತು ಮಕ್ಕಳನ್ನು ನಿರ್ವಹಿಸಿದ ಗಂಡಸರ ನಡೆಯನ್ನು ಒಪ್ಪಿದ್ದಾರೆಯೇ? ಉದ್ಯೋಗಂ ಪುರುಷ ಲಕ್ಷಣಂ ಎಂದು ಹೆಮ್ಮೆಯಿಂದ ಹೇಳುವ ಅವರು ಗೃಹ ಕೃತ್ಯವನ್ನು ಮಾಡಿಕೊಂಡು ಹೋಗುವ ಹೆಣ್ಣು ಮಕ್ಕಳನ್ನು ನಿಕೃಷ್ಟವಾಗಿ ಕಾಣುವುದೇಕೆ? ಕೌಟುಂಬಿಕ ಜವಾಬ್ದಾರಿ, ಮನೆಯ ಎಲ್ಲಾ ಆಗು ಹೋಗುಗಳ ನಿರ್ವಹಣೆಯನ್ನು ಮಾಡುವುದು ಅಷ್ಟೇನೂ ಸುಲಭದ ಮಾತಲ್ಲ ಎಂಬ ಅರಿವಿದ್ದರೂ ಕೂಡ ಹೆಣ್ಣು ಮಕ್ಕಳಿಗೆ ಅವಹೇಳನ ಮಾಡುವುದು ತಪ್ಪಿಲ್ಲ. ತಮ್ಮ ಅನುಕೂಲಕ್ಕಾಗಿ ನೀನೇ ಕುಟುಂಬದ ಯಜಮಾನಿ ಎಂದು ಪೂಸಿ ಹೊಡೆಯುತ್ತಾರೆ. ಆದರೆ ಅಪ್ಪಿತಪ್ಪಿ ಆಕೆ ಏನಾದರೂ ತುಸು ಹಣವನ್ನು ಅಪೇಕ್ಷಿಸಿದಾಗ ಮನೆಯ ಹಿತ್ತಲಲ್ಲಿ ದುಡ್ಡಿನ ಗಿಡ ನೆಟ್ಟಿಲ್ಲ, ಹೊರಗೆ ಹೋಗಿ ದುಡಿದುಕೊಂಡು ಬಾ, ಆಗ ಗೊತ್ತಾಗುತ್ತದೆ ನಿನಗೆ! ಎಂದು ಎಷ್ಟು ಜನ ಗಂಡಸರು ಹೇಳಿಲ್ಲ.

ಮನೆಯ ಮತ್ತು ಕೌಟುಂಬಿಕ ಜವಾಬ್ದಾರಿಗಳಿಂದ ತುಸು ಹೊತ್ತು ಮುಕ್ತಳಾಗಿ ತನ್ನದೇ ಆದ ಸ್ನೇಹಿತರ ವಲಯವನ್ನು ಸೃಷ್ಟಿಸಿಕೊಂಡು ಕೆಲ ಸಮಯವನ್ನು ಆಕೆಯೂ ಕಳೆಯಲಿ ಎಂದು ಯಾರಾದರೂ ಹೆಣ್ಣು ಮಕ್ಕಳಿಗೆ ಹೇಳಿದ್ದಾರೆಯೇ? ತನ್ನ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಲಿ ಎಂದು ಮನೆ ಮತ್ತು ಮಕ್ಕಳನ್ನು ನೋಡಿಕೊಂಡಿದ್ದಾರೆಯೇ? ಯಾರಾದರೂ ಏಕೆ! ಸ್ವತಹ ಆಕೆಯೇ ಎಂದಾದರೂ ತನ್ನ ವೈಯುಕ್ತಿಕ ಬದುಕಿನ ಕುರಿತು ಯೋಚಿಸಲು ಸಾಧ್ಯವಾಗಿದೆಯೇ?

ಮದುವೆಯಾಗುವವರೆಗೂ ತನ್ನ ವೈಯುಕ್ತಿಕತೆಯ ಕುರಿತು ಯೋಚಿಸುವ ಹೆಣ್ಣುಮಗಳು ಮದುವೆಯಾದ ನಂತರ ಗಂಡನ, ಕುಟುಂಬದ ಮತ್ತೆ ತನ್ನ ಮಕ್ಕಳ ಕುರಿತು ಯೋಚಿಸುವಲ್ಲಿಯೇ ಆಕೆಯ ಬದುಕಿನ ಬಹು ಭಾಗ ಮುಗಿದು ಹೋಗಿರುತ್ತದೆ..... ಗಂಡ ಸಹೃದಯಿಯಾಗಿದ್ದರೆ ಆಕೆಯ ಬಾಳು ಸಹನೀಯ. ಎಲ್ಲಾದರೂ ನಾಲ್ಕು ತೀರ್ಥಕ್ಷೇತ್ರಗಳು, ಪ್ರೇಕ್ಷಣೀಯ ಸ್ಥಳಗಳ ದರ್ಶನ ಮಾಡಿಸಿದ್ದರೆ ಸರಿ, ಇಲ್ಲವಾದರೆ ಎಲ್ಲವನ್ನು ದೂರದರ್ಶನದಲ್ಲಿಯೇ ನೋಡುವ ಭಾಗ್ಯ ಆಕೆಯದು.

ಇವೆಲ್ಲದರ ಮಧ್ಯದಲ್ಲಿ ಏನನ್ನಾದರೂ ಆಕೆ ಬಯಸಿದರೆ ನಿಮ್ಮಪ್ಪನ ಮನೆಯಿಂದ ಗಂಟು ತಂದಿರುವೆಯ? ನಿಮ್ಮ ಅಪ್ಪನ ಮನೆಯಿಂದ ತಗೊಂಡು ಬಾ ಎಂಬ ಮಾತನ್ನು ಮುದುಕಿಯಾದರೂ ಆಕೆ ಕೇಳಿಸಿಕೊಳ್ಳುವ ಸೌಭಾಗ್ಯ? ಇನ್ನು ಮಕ್ಕಳಿಂದ ನಿರೀಕ್ಷಿಸುವ ಹೊತ್ತಿಗೆ ಅವರು ಮದುವೆಯಾಗಿ ಅವರ ಸಂಸಾರ ದೊಡ್ಡದಾಗಿ ತಾಯಿಯಾದಾಕೆ ಮಕ್ಕಳನ್ನು ನೋಡಿಕೊಳ್ಳಲು ಮಾತ್ರ ಬೇಕು, ಆಕೆಯ ಕಷ್ಟ ಸುಖಗಳು ನಮಗೆ ಬೇಡ ಎಂಬಂತಾದರೆ ಆಕೆ ಮತ್ತೆ ಅತಂತ್ರಳೇ.

ತಮಾಷೆಗಾಗಿಯಾದರೂ ಕೆಲವೊಮ್ಮೆ ಕೆಲವು ಮಾತುಗಳು ಆಕೆಯನ್ನು ನೋಯಿಸುತ್ತವೆ ಎಂಬ ಅರಿವನ್ನು ಹೊಂದಿರದ ಬಹಳಷ್ಟು ಜನರು ನಮ್ಮ ಸಮಾಜದಲ್ಲಿ ಕುಟುಂಬದಲ್ಲಿ ಇದ್ದೇ ಇರುತ್ತಾರೆ.

ಒಟ್ಟಿನಲ್ಲಿ ಹುಟ್ಟಿದ ಮನೆಯಲ್ಲಿ, ಮೆಟ್ಟಿದ ಮನೆಯಲ್ಲಿ ಆಕೆ ಅತಂತ್ರಳಾಗಿಯೇ ಬದುಕುವ ಪರಿಸ್ಥಿತಿ ಇದ್ದು, ಕೆಲಸ ಮಾಡಲು ಇಡೀ ಮನೆಯೇ ಆಕೆಯದಾದರೂ ಕೂಡ ವಾಸ್ತವದಲ್ಲಿ ಮನೆಯ ಒಂದೇ ಒಂದು ಭಾಗವೂ ಆಕೆಯದಲ್ಲ ಎಂಬ ನೋವು ಆಕೆಯನ್ನು ಸದಾ ಕಾಡುತ್ತದೆ.

ಹೆಣ್ಣು ಮಗಳನ್ನು ಅಬಲೆ, ಸಬಲೆ, ಕೋಮಲೆ ಎಂದೆಲ್ಲಾ ಕರೆದು ಆಕೆಯ ರಕ್ಷಣೆಗೆ ಧಾವಿಸುವ ಬದಲು ನಮ್ಮ ಮನೆ ಮನಗಳಲ್ಲಿ ಆಕೆಯನ್ನು ಕೂಡ ಓರ್ವ ಮನುಷ್ಯಳು, ಆಕೆಗೂ ನಮ್ಮಂತೆಯೇ ಮನಸ್ಸಿದೆ, ಆಕೆಯ ಮನಸ್ಸಿನಲ್ಲಿಯೂ ಹತ್ತು ಹಲವು ತಾಕಲಾಟಗಳಿವೆ. ಆಕೆಯು ಕೂಡ ಪುರುಷರಷ್ಟೇ ಜೀವನದಲ್ಲಿ ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಔದ್ಯೋಗಿಕ ಮತ್ತು ಸೇವಾ ವಲಯಗಳಲ್ಲಿ ಕಾರ್ಯನಿರ್ವಹಿಸಲು ಸನ್ನದ್ಧಳಾಗಿದ್ದಾಳೆ ಎಂದು ಏಕೆ ಯೋಚಿಸುವುದಿಲ್ಲ. ಈಗಿರುವಂತೆಯೇ ಹೆಣ್ಣು ಮಕ್ಕಳು ಮುಂದೆಯೂ ಇರುತ್ತಾರೆ ಎಂಬ ಯಾವುದೇ ಗ್ಯಾರಂಟಿಗಳನ್ನು ಸ್ವತಃ ಪಾಲಕರು ಕೊಡಲು ಸಾಧ್ಯವಾಗುತ್ತಿಲ್ಲ. ವಿದ್ಯಾವಂತ ಹೆಣ್ಣು ಮಕ್ಕಳು ತಮ್ಮ ಸುತ್ತಣ ಸಮಾಜದ ಆಗುಹೋಗುಗಳನ್ನು ನೋಡುತ್ತಿದ್ದು ಈಗಾಗಲೇ ವಿವಾಹವನ್ನು ತಮ್ಮೆಲ್ಲ ಸಂತೋಷಗಳಿಗೆ ಕಡಿವಾಣ ಹಾಕುವ ಬಂಧನ ಎಂಬಂತೆ ನೋಡುತ್ತಿದ್ದು ಮುಂಬರುವ/ಪ್ರಸ್ತುತ ದಿನಮಾನಗಳಲ್ಲಿ ತನ್ನ ವೈಯುಕ್ತಿಕ ಸ್ವಾತಂತ್ರ್ಯಕ್ಕಾಗಿ, ಸಾಮಾಜಿಕ ಸಮಾನತೆಗಾಗಿ ಕೂಗು ಹಾಕಬಹುದು.

ಹೆಣ್ಣು ಮಕ್ಕಳಿಗೆ ಕೇವಲ ಪ್ರೀತಿ, ವಿಶ್ವಾಸ, ಬಾಂಧವ್ಯ ಗಳ ಮಹತ್ವ, ಸಂವೇದನೆಗಳನ್ನು ಹೇಳಿಕೊಡುವ ಪಾಲಕರು ತಮ್ಮ ಗಂಡು ಮಕ್ಕಳಿಗೂ ಕೂಡ ಹೆಣ್ಣು ಮಕ್ಕಳೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕು ಎಂಬ ಸೂಕ್ಷ್ಮ ಸಂವೇದನೆಗಳನ್ನು ಸಮಾನತೆಯ ಮನಸ್ಥಿತಿಯನ್ನು ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಪ್ರಜ್ಞೆಯನ್ನು ಕಲಿಸಿ ಕೊಡಲೇಬೇಕು.

ದಾಂಪತ್ಯ ಎಂಬುದು ಪತಿ ಹೇಳಿದ್ದನ್ನು ಸತಿಯು ಕೇಳುವ, ಪತಿಯ ಸಕಲ ಇಚ್ಛೆಗಳನ್ನು ಪತ್ನಿಯು ಪೂರೈಸುವ ಕೊಡುವ ತೆಗೆದುಕೊಳ್ಳುವ ವ್ಯವಹಾರವಾಗದೆ, ಬದುಕಿನ ಬಂಡಿಯನ್ನು ಸಾಗಿಸಲು ಪರಸ್ಪರ ಕಷ್ಟ ಸುಖಗಳನ್ನು ಹಂಚಿಕೊಳ್ಳುವ, ಎಂತದ್ದೇ ತೊಂದರೆ ಇದ್ದರೂ ಕೂಡ ಜೊತೆಗೂಡಿ ಪರಿಹರಿಸಿಕೊಳ್ಳುವ, ನಾನು ನೀನು ಎಂಬ ಹೆಚ್ಚುಗಾರಿಕೆ ಇಲ್ಲದ ಬಾಂಧವ್ಯವಾಗಿ ಒಡ ಮೂಡಬೇಕು. ಒಬ್ಬರಿಗೊಬ್ಬರು ಪೂರಕವಾಗಿ ಬದುಕಿನಲ್ಲಿ ನೆಲೆ ನಿಲ್ಲಬೇಕು. ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಬೆಂಬಲವನ್ನು ನೀಡುವಂತಹ ವಾತಾವರಣವನ್ನು ಕಲ್ಪಿಸಬೇಕು. ಆಕೆ ಹೇಳದೆಯೂ ಕೂಡ ಆಕೆಯ ಬೇಕು ಬೇಡಗಳನ್ನು ಅರಿತು ಪೂರೈಸುವಂತಹ ಸೂಕ್ಷ್ಮ ಸಂವೇದನೆಗಳನ್ನುಳ್ಳ ಗಂಡು ಮಕ್ಕಳನ್ನು ಬೆಳೆಸಬೇಕು.

ಇಷ್ಟೆಲ್ಲಾ ಆದರೂ ತನ್ನಲ್ಲಿಲ್ಲದ ಗುಣಗಳನ್ನು ಮನೆಯವರ, ಸಮಾಜದ ಮತ್ತು ಜಗತ್ತಿನ ಜನರ ಒಪ್ಪುವಿಕೆಗಾಗಿ ಅಪ್ಪಿಕೊಳ್ಳುವುದ ರಿಂದಲೇ ಹೆಣ್ಣು ಮಕ್ಕಳನ್ನು ನಮ್ಮ ಸಂಸ್ಕೃತಿಯಲ್ಲಿ ಪೂಜಿಸುತ್ತಾರೆ, ಆರಾಧಿಸುತ್ತಾರೆ ಆದರೆ ಮನುಷ್ಯರಂತೆ ಅವರೊಂದಿಗೆ ವರ್ತಿಸುವು ದಿಲ್ಲ. ಹೆಣ್ಣು ಮಕ್ಕಳಿಗೆ ಮುಖ್ಯವಾಗಿ ಬೇಕಾಗಿರುವುದು ಆರಾಧನೆಯಲ್ಲ ತಮ್ಮನ್ನು ತಾವಿರುವಂತೆಯೇ ಸ್ವೀಕರಿಸುವ ಪ್ರೀತಿಸುವ ಒಡನಾಡುವ ಒಪ್ಪಿಕೊಳ್ಳುವ ಜಗತ್ತಿನಲ್ಲಿ ಆಕೆ ಬೆಚ್ಚಗೆ ಇರಲು ಬಯಸುತ್ತಾಳೆ.

ಅಂತಹ ಒಂದು ಸ್ವಸ್ಥ, ಸುಮಧುರ ಸಮಾಜದ ನಿರ್ಮಾಣಕ್ಕಾಗಿ ಕಾಯುತ್ತಿರುವ ಪ್ರತಿ ಹೆಣ್ಣು ಮಕ್ಕಳಿಗೂ ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯಗಳು

## ಮಹಿಳೆಯರಿಗೆ ಸಮಾನ ಅವಕಾಶ ಅಗತ್ಯ



ಮೊದಲ ಪುಟದಿಂದ

ಭುವನೇಶ್ವರಿ ದೇವಿ, ಕಿತ್ತೂರು ರಾಣಿ ಚೆನ್ನಮ್ಮ, ಮದರ್ ತೆರೇಸಾ ಒನಕೆ ಓಬವ್ವ, ಅಕ್ಕ ಮಹಾದೇವಿ, ಜಾನ್ಸಿ ರಾಣಿ ಲಕ್ಷ್ಮೀಬಾಯಿ, ಲತಾ ಮಂಗೇಶ್ಕರ್ ಮಹನೀಯರ ವೇಷ ಧರಿಸಿ ಮಹಿಳಾ ದಿನಾಚರಣೆಯ ಗಮನ ಸೆಳೆಯಿತು. ಮಹಿಳೆಯರು ಸಾಂಪ್ರಾದಾಯಿಕ ಧರಿಸು ಇಳಕಲ್ ಸೀರೆಗಳನ್ನು ಧರಿಸಿ ಬೈಕ್ ಜಾಥಾದಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ವೇತಾ, ಜಿಲ್ಲಾ ನಿರೂಪಣಾಧಿಕಾರಿ ಸುಭದ್ರ ದೇವಿ, ಹಂಪಿ ಗ್ರಾಪಂ ಅಧ್ಯಕ್ಷೆ ರಜನಿ ಷಣ್ಮುಖಗೌಡ, ಹಂಪಿ ಗ್ರಾಪಂ ಸದಸ್ಯೆ ರೂಪ, ಸಿಡಿಪಿಒ ಸಿಂಧೂ, ಸಂಸ್ಥೆಯ ಅಧ್ಯಕ್ಷ ಭೀಮರಾಜ.ಯು, ಹಿರಿಯ ಮೇಲ್ವಿಚಾರಕಿ ಅಂಬುಜ, ಮಿಷನ್ ಶಕ್ತಿ ಸಂಯೋಜಕ ಶಿವಣ್ಣ ನಾಯಕ್ ಸೇರಿದಂತೆ ಇತರರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸ್ತ್ರೀ ಅಂದರೆ ಅಷ್ಟೇ ಸಾಕೆ

ಉಸಿರಕೊಟ್ಟು ಅಮೃತವ ಉಣಿಸಿದ ಮಾತೆ
ಪ್ರೀತಿ–ಮಮತೆಯ ಧಾರೆ ಎರೆದ ದೇವತೆ
ಕಷ್ಟ ಎನ್ನಲು ಹೆಗಲು ಕೊಟ್ಟು ನಿಂತೆ
ತಿದ್ದಿ–ತೀಡಿ ಜೀವನವ ರೂಪಿಸಿದ ದಾತೆ

ತಾಯಿ ಮಗಳು ಮಡದಿ ಸಹೋದರಿ
ರೂಪದಿ
ಸಬಲೆ ಸಮನ್ವಯಿ ಇವಳು ಎಲ್ಲಾ ರಂಗದಿ
ಧೈರ್ಯ ಶೌರ್ಯವಂತಳಿವಳು ಗಂಡಿನ
ತೆರದಿ
ಕೈಯ ಎತ್ತಿ ಮುಗಿಯಿರಿ ಧನ್ಯತಾ ಭಾವದಿ

ನೋವಿನಲ್ಲೂ ಮಂದಹಾಸವ ಬೀರುವಳು
ತನ್ನವರಿಗಾಗಿ ಜೀವವ ಸವೆಸುವಳು
ಮನೆಯವರಿಗಾಗಿ ಅನುದಿನ
ದುಡಿಯುವವಳು
ಕಷ್ಟಗಳ ನುಂಗಿ ಸುಖವನ್ನು ಹಂಚುವಳು

ತನು ಮನವ ಸಂಸಾರಕ್ಕಾಗಿ
ಮುಡಿಪಿಟ್ಟಳಾಕೆ
ಬೆಲೆಕಟ್ಟಲಾಗದ ಅಪರೂಪದ ಹೊನ್ನು
ಈಕೆ
ಇವಳಿಗೆ ಬೇರೆ ಹೋಲಿಕೆ ಏಕೆ
ಸ್ತ್ರೀ ಅಂದರೆ ಅಷ್ಟೇ ಸಾಕೆ

– ಚೇತನ ಭಾರ್ಗವ, ಬೆಂಗಳೂರು

### ಬದಲಾವಣೆ

ನಮ್ಮ ಸ್ಥಿತಿಗತಿ ಪ್ರಗತಿಯಲಿ
ನಮ್ಮ ನಡೆ ನುಡಿ ಬದಲಾಗಿದೆ
ನಾನು ನನ್ನದು ಸ್ವಾರ್ಥ ಅಡಗಿದೆ
ಎಲ್ಲ ಬಲ್ಲವರು ನಾವು ಈ ಜಗದಲಿ।

ನಮ್ಮ ರಾಜಕೀಯ ನಾಯಕರು
ದಿನಕ್ಕೊಂದು ಮಾತಿನ ಪಾರಾಯಣ
ನಿತ್ಯವೂ ನಡೆದಿದೆ ರಗಳಿ ರಾಮಾಯಣ
ನಿತ್ಯ ಟಿ .ವಿ.ಪೇಪರಲಿ ನಮ್ಮ ನಾಯಕರು।

ಸಾಹಿತ್ಯ ಲೋಕದಲಿ ಸಾಹಿತ್ಯದ ಅಬ್ಬರ
ನಿತ್ಯ ಲೋಕಾರ್ಪಣೆ ಹಲವಾರು ಪುಸ್ತಕ
ಕೊಂಡು ಓದಿರೆಂದರೆ ಬಲೂ ದುಸ್ತರ
ಪುಕ್ಕಟೆ ಕೊಟ್ಟರೆ ಎಲ್ಲಿಲ್ಲದ ಕಾತುರ।

ಪ್ರಿತಿ ವಿಶ್ವಾಸ ಮರೆಯಾಗುತಿದೆ
ಬಾಂಧವ್ಯದ ಕೊರತೆ ಹೆಚ್ಚಾಗಿದೆ
ನಾನು ನನ್ನದು ಅಷ್ಟೇ ಸಂಬಂಧ
ಏಕೆ ಮರೆಯಾಯ್ತು ಪರಸ್ಪರ ಬಂಧ।

ವ್ಯಾಪಾರಲ್ಲಿಯು ಮೋಸ ವಂಚನೆ
ಕಲಬೆರಿಕೆ ಮಾಡುವರು ದವಸ ದಾನ್ಯ
ಎಣ್ಣೆ ಬೆಣ್ಣೆಯಲಿ ಕಲಬೆರಿಕೆ ನಾನಾ ಬಗೆ
ಇವರ ವರ್ತನೆ ಕೇಳೋರಿಲ್ಲ ಮಹಾಜನ।

ಶಿಕ್ಷಣದಲಿ ನಡೆಯುತಿದೆ ಭಾರಿ ಸಂಚು
ಸರ್ಕಾರಿ ಶಾಲೆಗಳಿಗಿಲ್ಲ ಮಾನ್ಯತೆ
ಡೋನೇಷನ್ ಕೊಡುವುದೇ ಈಗ ಘನತೆ
ಕನ್ನಡ ಶಾಲೆ ಉಳಿಸಿ ಬೆಳಸು ನನ್ನ ನಮ್ರತೆ।

ಯಾರಿಗೆ ಯಾರೂ ಇಲ್ಲ ಈಗ
ತಮ್ಮ ಪಾಡಿಗೆ ತಾವೇ ಹಲವರು
ಬದಲಾಗುತಿದೆ ನಿತ್ಯವೂ ಈ ಯುಗ
ವೇಗದ ಭರಾಟೆಯಲಿ ಸಂಸ್ಕೃತಿ
ಮರೆತಿಹರು ।

– ಚಂದ್ರಶೇಖರಯ್ಯ ರೋಣದಮಠ

### ಹೇಗೆ ಪೊಗಳಲಿ

ಹೇಗೆ ಪೊಗಳಲಿ ನಾರಿ ನಿನ್ನನು
ತ್ಯಾಗ ನಿನ್ನಯ ಉಸಿರಲಿ
ಸಾಗಿ ಬರುತಿಹ ಬಾಳ ದುರಿತವ
ನೀಗಿ ತರುತಿಹೆ ನೆಮ್ಮದಿ

ಸಹನೆ ಎಂಬುದು ಹುಟ್ಟು ಗುಣವದು
ಮಹಿಯೆ ಉಪಮೆಯು ಎನಿಸಿದೆ
ಕಹಿಯ ನುಂಗುತ ನಗುವ ಬೀರುವ
ಮಹಿಳೆ ನಿನಗಿದೊ ನಮಿಸಿದೆ

ಹಲವು ಕರಗಳ ಹೊಂದಿದಂತಿದೆ
ಕೆಲಸ ಮುಗಿಸುವೆ ಒಮ್ಮೆಗೇ
ಕೆಲವು ಕಾರ್ಯವ ಏಕ ಸಮಯದೆ
ಛಲದಿ ಮಾಡುತ ಮುಗಿಸುವೆ

ಜನುಮ ನೀಡುವ ತಾಯಿ ನಾರಿಯೇ
ಅನುಜೆ ಸಹಿತವು ಮಹಿಳೆಯೆ
ಮನವ ಬೆಳಗುವ ಮಡದಿಯಾಗುವೆ
ತನುಜೆ ಪಾತ್ರವು ನಿನ್ನದೇ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಹೆಣ್ಣಿನಲ್ಲಿ ಸಾಮರ್ಥ್ಯವಿದೆ ಅವಕಾಶ ಕಲ್ಪಿಸಬೇಕಿದೆ

ಜಿ ಎಸ್ ಶಿವರುದ್ರಪ್ಪನವರು ಯಾವತ್ತೂ ನಮಗೆ ಪ್ರಾತಃ ಸ್ಮರಣಿಯರು ಎಂದರೆ ತಪ್ಪಿಲ್ಲ ಅವರ ಆಗಾದವಾದ ಜ್ಞಾನ, ಸಂಭಂದಗಳನ್ನು ಅವರು ಅವಲೋಕಿಸುವ ಪರಿ, ಅವರ ವಿಚಾರಗಳ ವ್ಯಾಪ್ತಿ ಮತ್ತು ವ್ಯಾಪಕತೆಯ ವಿಸ್ತಾರ ಅನಂತ ಎನ್ನುವುದಕ್ಕೆ ಸಾಕ್ಷಿಕರಿಸಬಲ್ಲ ಅನೇಕ ಕವಿತೆಗಳನ್ನು ನಾವೆಲ್ಲ ಓದಿ ಆನಂದಿಸಿದ್ದೇವೆ. ಮಾರ್ಚ್ 08 ವಿಶ್ವ ಮಹಿಳಾ ದಿನದ ವಿಶೇಷತೆಯ ಹಿನ್ನೆಲೆಯಲ್ಲಿ ಅವರ "ಆಕಾಶದ ನೀಲಿಯಲ್ಲಿ" ಎಂದು ಆರಂಭವಾಗುವ ಕವಿತೆಯ ಸಾಲುಗಳನ್ನೊಮ್ಮೆ ಗ್ರಹಿಸುವುದಾದರೆ, ನಮ್ಮ ಒಳಗಣ್ಣುಗಲು ತೇವವಾಗುವುದರಲ್ಲಿ ಅನುಮಾನವೇ ಇಲ್ಲಾ. ಮುದ್ದು ಮಗಳಿಂದ ಆರಂಭವಾದ ಅವಳಯಾನ. ಮಗಳಾಗಿ, ಸಹೋದರಿಯಾಗಿ, ಮಡದಿಯಾಗಿ, ಅಮ್ಮನಾಗಿ ಮತ್ತೆ ಮಗುವಾಗುವ ವಿವಿಧ ಹಂತದ ಮಾನವ ಸಂಭಂದಗಳ ಸರಪಳಿಯಲ್ಲಿ ಒಂದು ಕೊಂಡಿ ಕಳಚಿದರೂ, ಮನುಷ್ಯನ ಈ ಯಾನ ಅಪೂರ್ಣವಾ ಗುವುದರಲ್ಲಿ ಸಂದೇಹವಿಲ್ಲ.

ಆಕಾಶದ ನೀಲಿಯಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ
ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಎಂದರೆ ಅಷ್ಟೆ ಸಾಕೇ

ಹಸಿರ ಉಟ್ಟ ಬೆಟ್ಟಗಳಲಿ
ಮೊಲೆ ಹಾಲಿನ ಹೊಳೆಯ ಇಳಿಸಿ
ಬಯಲ ಹಸಿರ ನಗಿಸಿದಾಕೆ
ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಎಂದರೆ ಅಷ್ಟೆ ಸಾಕೇ

ಮರಗಿಡ ಹೂ ಮುಂಗುರುಳನು
ತಂಗಾಳಿಯ ಬೆರಳೂ ಸವರಿ
ಹಕ್ಕಿ ಗಿಲಕಿ ಹಿಡಿಸಿದಾಕೆ
ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಎಂದರೆ ಅಷ್ಟೆ ಸಾಕೇ

ಮನೆಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper



ನಿನಗೆ ಬೇರೆ ಹೆಸರು ಬೇಕೇ
ಸ್ತ್ರೀ ಎಂದರೆ ಅಷ್ಟೆ ಸಾಕೇ

ನಮಗೆಲ್ಲ ಗೊತ್ತಿರುವಂತೆ ಮಾರ್ಚ್ 08 ವಿಶ್ವ ಮಹಿಳಾ ದಿನ. ಈ ದಿನದಂದು ಜಗತ್ತಿನ ಎಲ್ಲಾ ದೇಶಗಳಲ್ಲಿ ನಮ್ಮ ದೇಶಾದ್ಯಂತ ಸಹ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಮಹಿಳಾ ಜಗತ್ತಿನ ಸಾಧಕರನ್ನು ವಿಶೇಷವಾಗಿ ಆ ದಿನ ಗೌರವಿಸಲಾಗುತ್ತದೆ. ಅನೇಕ ವಿಚಾರಗೋಷ್ಠಿಗಳಲ್ಲಿ ಮಹಿಳಾ ಸಬಲೀಕರಣದ ಕುರಿತು ವಿವಿಧ ಚರ್ಚೆಗಳು ನಡೆಯುತ್ತವೆ. ಎಲ್ಲೆಡೆ ಮಹಿಳೆಯರ ಸಮಸ್ಯೆ ಮತ್ತು ಸವಾಲುಗಳ ಕುರಿತ ಭಾಷಣಗಳು ಕೇಳಿಬರುತ್ತವೆ. ಇವುಗಳ ಕುರಿತ ನಮ್ಮ ಮಾಧ್ಯಮಗಳಲ್ಲೂ ಈ ಬಗ್ಗೆ ವ್ಯಾಪಕವಾದ ವರದಿಗಳು ಬಿತ್ತರಗೊಳ್ಳುತ್ತವೆ. ಹಾಗೆಯೆ ಅಲ್ಲಿಗೆ ನಮ್ಮ ನಿಮ್ಮ ಜವಾಬ್ದಾರಿ ಮುಗಿದು ಹೋಗುತ್ತದೆಯೇ? ಇಲ್ಲ, ಒಂದು ವೇಳೆ ಹಾಗಾದರೆ ಅದು ನಿಜವಾದ ಮಹಿಳಾ ದಿನಾಚರಣೆ ಎನ್ನಿಸದು.

ಈ ದಿನ ಕೇವಲ ಒಂದೇ ದಿನಕ್ಕೆ ಸೀಮಿತವಾಗಬಾರದು? ಹಾಗಾದಂತೆ ನಾಡಿನ ದೇಶದ ಈ ಪ್ರಪಂಚದ ಪ್ರತಿಯೊಬ್ಬರೂ ಪ್ರತಿ ದಿನವನ್ನೂ ಮಹಿಳಾ ದಿನದಂತೆ ಬಾವಿಸಬೇಕು, ವಿಶೇಷವಾಗಿ ಪ್ರತಿಯೊಬ್ಬ ಮಹಿಳೆಯೂ ತನಗೆ ತಾನೇ ಈ ಅಂಶವನ್ನು ಕೇಳಿಕೊಳ್ಳಬೇಕಿದೆ. ಆಗ ಮಾತ್ರ ಮಹಿಳಾ ದಿನಕ್ಕೊಂದು ನಿಜವಾದ ಅರ್ಥ ಬರುವುದು. ನಮ್ಮಗಳ ಮಧ್ಯ ಮಹಿಳೆಯರು ಮಾಡುವ ಸಾಧನೆ ಮತ್ತು ಅವರ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ಮಹಿಳೆಯರ ಸಬಲೀಕರಣವನ್ನು ಖಾತ್ರಿಪಡಿಸ ಬೇಕಾಗಿದೆ.

ಈ ನಿಟ್ಟಿನಲ್ಲಿ ವೈಯಕ್ತಿಕವಾಗಿ, ಸಂಘಸಂಸ್ಥೆಗಳು, ಸರಕಾರಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಹಿಳೆಯರಿಗೆ ಸ್ವಉದ್ಯೋಗ, ಸ್ವಾವಲಂಬಿ ಜೀವನದ ಆಸರೆಯನ್ನಿತ್ತು ಅವರನ್ನು ಆರ್ಥಿಕವಾಗಿ, ಸಾಮಾಜಿಕ ವಾಗಿಯೂ ಸಬಲೀಕರಣಗೊಳಿಸಿಬೇಕಾಗಿದೆ.

ಮಹಿಳಾ ದಿನ ಯಶಸ್ವಿಯಾಗಬೇಕಾದರೆ ಮಹಿಳೆಯರೂ ಸೇರಿದಂತೆ, ಮಹಿಳೆಯರ ಕುರಿತು ನಾವು ನೀವೆಲ್ಲರು ಅರಿತುಕೊಳ್ಳಬೇಕಾದ ಕೆಲ ನಿಜಾಂಶಗಳು ಎಂದರೆ.

1–ಮಹಿಳೆಗೆ ಅನುಕಂಪದ ಅವಶ್ಯಕತೆಯಿಲ್ಲ, ಬದಲಿಗೆ ಅವಕಾಶದ ಹಾದಿಯನ್ನು ತೆರೆಯಬೇಕಾಗಿದೆ.

2–ಅವಕಾಶವನ್ನೂ ಅನಿವಾರ್ಯವಾಗಿ ಕೊಡಬೇಕು ಎಂದಲ್ಲ, ಬದಲಿಗೆ ಅದನ್ನು ಪಡೆದುಕೊಳ್ಳುವ ಎಲ್ಲಾ ಸಾಮರ್ಥ್ಯ ಅವಳಲ್ಲಿದೆ.

3–ಅವಳನ್ನ ಅವಳಿದ್ದಂತೆ ಒಪ್ಪಿಕೊಳ್ಳಬೇಕಾಗಿದೆ, ಬಹುಮುಖ್ಯವಾಗಿ ನಾವುನೀವೆಲ್ಲರೂ ಅವಳ ಕುರಿತ ನಮ್ಮ ಅರಿವಿನ ಆಳವನ್ನು ವಿಸ್ತರಿಸಿಕೊಳ್ಳಬೇಕಾಗಿದೆ.

ಸಹಜವಾಗಿ ವಿಶಿಷ್ಠವಾದಂತಹ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವ ಮಹಿಳೆಯು ಇನ್ನೂ ತನ್ನ ಸಾಮರ್ಥ್ಯವನ್ನು ಪೂರ್ಣಪ್ರಮಾಣದಲ್ಲಿ ಮಾನವ ಕಲ್ಯಾಣಕ್ಕೆ ಬಳಸ ಬೇಕಾಗಿದೆ. ಈ ರೀತಿ ಸಮಾಜದ ಏಳ್ಗೆಗೆ ಕೊಡುಗೆ ನೀಡಿದ ಸಾವಿರಾರು ಉದಾಹರಣೆಗಳು ಸಿಗುತ್ತವೆ. ಇವರುಗಳ ನಿತ್ಯ ನಿರಂತರ ಛಲ ಬಿಡದ ಅವಿರತ ಪ್ರಯತ್ನ ಮಹಿಳಿಯರಿಗೆ ಅನೇಕ ರೀತಿಯಲಿ ಯಶಸ್ಸನ್ನು ತಂದುಕೊಟ್ಟಿವೆ. ಇಂತಹ ಸಾಧಕರಿಂದಲೇ ಮಹಿಳಾ ದಿನಕ್ಕೊಂದು ಅರ್ಥ ಬರುತ್ತದೆ. ಪ್ರತಿಯೊಬ್ಬರೂ ಇವರಂತೆ ಸ್ವಾವಲಂಬಿ ಬದುಕನ್ನು ನಡೆಸುವ ನಿರ್ಧಾರ ವನ್ನು ಈ ಮಹಿಳಾ ದಿನಾಚರಣೆಯಂದು ಕೈಗೊಂಡರೆ, ಅವರ ಬಾಳು ಬೆಳಗುತ್ತದೆ. ಆ ನಿಟ್ಟಿನಲ್ಲಿ ನಾಡಿನ, ದೇಶದ ಹೆಮ್ಮೆಯ ಎಲ್ಲ ಮಹಿಳೆಯರು ಪ್ರಯತ್ನ ಪಡುವಂತಾಗಲಿ ಎಂಬ ಆಶಯ ನಮ್ಮದು. ಅದಕ್ಕೆ ಪೂರಕವಾದ ವಾತಾವರಣವನ್ನು, ಅವರಿಗೆ ಬೇಕಾದ ತರಬೇತಿಯನ್ನು, ಅಗತ್ಯ ಮಾಹಿತಿಯನ್ನು, ಬೇಕಾದ ಮಾರ್ಗದರ್ಶನವನ್ನು, ಆರ್ಥಿಕ ನೆರವು, ಒದಗಿಸುವ ಕೆಲಸವನ್ನು ಮಾಡಬೇಕಾಗಿರುವುದು ಸುಶೀಕ್ಷಿತ ಸಮಾಜದ ಕರ್ತವ್ಯ ಎಂದು ಮನಗಾಣುತ್ತಾ... ಎಲ್ಲರಿಗೂ ವಿಶ್ವ ಮಹಿಳಾ ದಿನಾಚರಣೆಯ ಶುಭಾಶಯಗಳು.

# ಜೀವ ಹೆಣ್ಣಿಂದ, ಜೀವನವೂ ಹೆಣ್ಣಿಂದ

ಬೆಳಕನಿಟ್ಟು ತೂಗಿದಾಕೆ, ನಿನಗೆ ಬೇರೆ ಹೆಸರು ಬೇಕೆ..
"ಒಳ್ಳೆಯ ಜೀವನ ಅಪೇಕ್ಷಿಸುವವರು ಒಮ್ಮೆ ಹೆಣ್ಣಾಗಿ ಹುಟ್ಟಬೇಕು"– ನೀಟ್ಸೆ.
ವಿಶ್ವದ ಎಲ್ಲಾ ಮಹಿಳೆಯರಿಗೆ "ಅಂತರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು".
"ಜೀವ ಹೆಣ್ಣಿಂದ ಜೀವನ ಹೆಣ್ಣಿಂದ". ಪ್ರತಿ ದಿನ ನಿನ್ನದೇ ಇರುವಾಗ ನಿನಗೊಂದು ದಿನ ಬೇಕಿತ್ತಾ ಎನ್ನುವ ಭಾವನೆ ಮೂಡುವುದು ಸಹಜ. ಆದರೆ ಮಹಿಳಾ ಹಕ್ಕುಗಳಿಗೆ ಸಂಬಂಧಿಸಿದ ನಿರ್ದಿಷ್ಟ ವಿಷಯ, ಮಹಿಳಾ ಸಮಾನತೆಗಾಗಿ ಈ ದಿನದ ಅವಶ್ಯಕತೆ ಪ್ರತಿಯೊಬ್ಬ ಮಹಿಳೆಗೂ ಇದೆ.

ಆರಂಭದ ಹಿನ್ನೆಲೆ:–1910 ಆಗಸ್ಟಿನಲ್ಲಿ ಡೆನ್ಮಾರ್ಕಿನ ಕೋಪನ್ ಹೆಗ್ನಲ್ಲಿ ಅಮೇರಿಕನ್ ಸಮಾಜವಾದಿಗಳಿಂದ ಪ್ರೇರಿತರಾದ ಜರ್ಮನ್ ಪ್ರತಿನಿಧಿಗಳಾದ ಕಾರಾ ಜಟ್ಕಿನ್, ಕೆಟ್ ಡಂಕರ್, ಪೌಲಾತಿ ಡೇ ಮುಂತಾದವರು ಸೇರಿಕೊಂಡು ವಾರ್ಷಿಕ ಮಹಿಳಾ ದಿನದ ಪ್ರಸ್ತಾವನೆಯನ್ನು ಪ್ರಸ್ತಾಪಿಸಿದರು. ಆದರು ಯಾವ ದಿನವೆಂದು ನಿರ್ಧಾರವಾಗಲಿಲ್ಲ. ಕೊನೆಗೆ ವಿವಿಧ ದೇಶದ 100 ಪ್ರತಿನಿಧಿಗಳು ಮಹಿಳೆಯರ ಮತದಾನದ ಹಕ್ಕು ಸೇರಿದಂತೆ ಸಮಾನ ಹಕ್ಕುಗಳನ್ನ ಉತ್ತೇಜಿಸುವ ತಂತ್ರವಾಗಿ ಈ ಕಲ್ಪನೆಯನ್ನು ಒಪ್ಪಿಕೊಂಡರು. 1911ರಲ್ಲಿ ಮೊದಲ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಸ್ಟ್ರಿಯ, ಹಂಗೇರಿ, ಡೆನ್ಮಾರ್ಕ್ ,ಜರ್ಮನಿಯಲ್ಲಿ ಒಂದು ಮಿಲಿಯನ್ ಗಿಂತಲೂ ಹೆಚ್ಚು ಜನರು ಆಚರಿಸಿದರು ಸಹ ದಿನಾಂಕ ನಿರ್ಧಾರವಾಗಲಿಲ್ಲ. ಕೊನೆಗೆ 1914ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಮಾರ್ಚ್ ಎಂಟರಂದು ಜರ್ಮನಿಯಲ್ಲಿ ಮೊದಲ ಬಾರಿಗೆ ಆಚರಿಸಲಾಯಿತು.

ಸಮಾನ ವೇತನ, ಸಮಾನ ಆರ್ಥಿಕ ಅವಕಾಶ, ಸಮಾನ ಕಾನೂನು ಹಕ್ಕುಗಳು, ಮಕ್ಕಳ ಆರೈಕೆ ಮತ್ತು ಮಹಿಳೆಯರ ಮೇಲಿನ ಹಿಂಸಾಚಾರವನ್ನು ತಡೆಗಟ್ಟುವ ಉದ್ದೇಶದಿಂದ ಇದನ್ನು ಪ್ರಾರಂಭಿಸಲಾಯಿತು. ವಿಶ್ವಸಂಸ್ಥೆ 1975ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಪ್ರಾರಂಭಿಸಿತು. ಆ ವರ್ಷವನ್ನೇ ಮಹಿಳಾ ವರ್ಷವೆಂದು ಘೋಷಿಸಿತು ಅಂದಿನಿಂದ ಎಲ್ಲಾ ದೇಶಗಳು ಇದನ್ನು ಆಚರಿಸುತ್ತಿವೆ. ಪ್ರತಿ ವರ್ಷದ ಆಚರಣೆಯು ಮಹಿಳಾ ಹಕ್ಕುಗಳ ಒಳಗಿನ ನಿರ್ದಿಷ್ಟ ವಿಷಯ ಅಥವಾ ಸಮಸ್ಯೆಯನ್ನು ಕೇಂದ್ರೀಕರಿಸುತ್ತವೆ.

"ಆದರ್ಶ ಹೆಣ್ಣಿನ ಜೀವನ ಬರೆಯಲಾರದ ಪುಸ್ತಕದಂತೆ".

"ಸಜ್ಜನ ಸ್ತ್ರೀಯರ ಬದುಕು ಕಲ್ಲಿನಲ್ಲಿ ಕೆತ್ತಿದ ಅಕ್ಷರಗಳಂತೆ ಶಾಶ್ವತವಾಗಿರುತ್ತದೆ" ಎನ್ನುವ ಶೇಕ್ಸ್ಪಿಯರ್ ವಾಣಿಯಂತೆ ಮಹಿಳೆ ಇಂದು ಎಲ್ಲಾ ರಂಗಗಳಲ್ಲೂ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಾಳೆ. ಇದು ಇಂದು ನಿನ್ನೆಯದಲ್ಲ. ವೇದಗಳ ಕಾಲದಿಂದಲೂ ಸ್ತ್ರೀಯರಿಗೆ ಉನ್ನತ ಸ್ಥಾನಮಾನ ಗಳಿದ್ದವು. ಮೈತ್ರಿ ,ಗಾರ್ಗಿ ,ಇಂದ್ರಾಣಿ, ಅರುಂಧತಿ ಮುಂತಾದವರು ಪುರುಷರಿಗೆ ಸಮಾನವಾಗಿ ಕೃತಿಗಳನ್ನು ರಚಿಸಿದ್ದಾರೆ. ಇವರ ನಂತರ ಆಧ್ಯಾತ್ಮಿಕ ರಂಗದಲ್ಲಿ ನೋಡುವುದಾದರೆ ಮೀರಾಬಾಯಿ, ಅಕ್ಕಮಹಾದೇವಿ, ಮುಕ್ತಾಯಕ ಮುಂತಾದವರು ಆಧ್ಯಾತ್ಮಿಕ ರಂಗದಲ್ಲಿ ಸ್ತ್ರೀಯರಿಗೆ ಸ್ಥಾನವನ್ನು ದೊರಕಿಸಿ ಕೊಟ್ಟವರು. ಸ್ತ್ರೀ ,ಪುರುಷರಲ್ಲಿ ಭೇಧ ಭಾವವಿಲ್ಲವೆಂದು ಶರಣರು ಸಾಧಿಸಿ ತೋರಿಸಿದರು. ಜ್ಞಾನ ಕ್ಷೇತ್ರದಲ್ಲಿ ಲಿಂಗ ಬೇಧಕ್ಕೆ ಎಡೆ ಇಲ್ಲ. "ಅರು ಹಿಂಗೆ ಹಿರಿದು ಕಿರಿದುಂಟೆ" ಎಂದು ನುಡಿದ ಶರಣರು, ಸ್ತ್ರೀಯರಿಗೆ ಸಮಾಜದಲ್ಲಿ ಉನ್ನತ ಸ್ಥಾನವನ್ನು ನೀಡಿದರು. ಅಲ್ಲಮಪ್ರಭುದೇವರು ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು, ಮಣ್ಣು ಮಾಯೆ ಎಂಬರು, ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ , ಮನದ ಮುಂದಣ ಆಸೆಯೇ ಮಾಯೆ ಕಾಣ ಗುಹೇಶ್ವರ ಎಂದು ನುಡಿದರೆ, ಸಿದ್ಧರಾಮೇಶ್ವರರು ಹೆಣ್ಣು ಹೆಣ್ಣಲ್ಲ ,ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ಎಂದು ಹೆಣ್ಣಿನ ಮಹತ್ವವನ್ನು ಸಾರಿದರು. ಇನ್ನು ನಮ್ಮ ಬಸವಣ್ಣನವರು 'ಸ್ತ್ರೀಯ ಕಂಡು ಅಳುಪದಿರ ಎಲೆ ಮನವೇ ಪರ ವಧುವನ್ನು ಮಹಾದೇವಿಯಂಬೇ ಕೂಡಲಸಂಗಮದೇವ" ಎಂದು ನುಡಿದರು.ಪುರುಷ ಸಮಾಜವನ್ನು ಧಿಕ್ಕರಿಸಿ ಜಗತ್ತೇ ನಿಬ್ಬೆರಗಾಗುವಂತೆ ಬಾಳಿದವಳು ಅಕ್ಕಮಹಾದೇವಿ. ಅವಳ ಜೀವನ ಸ್ತ್ರೀ ಕುಲಕ್ಕೊಂದು ಹೆಮ್ಮೆಯ ಗರಿ.



ಕೊಟ್ಟೂರೇಶ್ವರಿ ಬಸಾಪುರ.
ಶಿಕ್ಷಕಿ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper



ತನ್ನಿಚ್ಛೆಯಂತೆ ಸ್ವಾತಂತ್ರ ಹೊಂದಿ ಸ್ವಾಭಿಮಾನಿಯಾಗಿ, ಆತ್ಮವಿಶ್ವಾಸದಿಂದ ಬಾಳುವ ಶಕ್ತಿಯೇ ಮಹಿಳಾ ಸಬಲತೆ. ಪ್ರಪಂಚದ ಪುರುಷರಿಗೆ ಹೋಲಿಸಿದರೆ ಹೆಚ್ಚು ಪ್ರಮಾಣದ ಮಹಿಳೆಯರು ಬಡತನ, ಅನಕ್ಷರತೆ ಹಾಗೂ ಅನಾರೋಗ್ಯದಲ್ಲಿದ್ದರೆ, ಹಸಿವು, ಅಸಮಾನತೆ, ಶೋಷಣೆಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯ ಮೇಲೆ ಇವೆ.

" ಮಹಿಳೆಯರ ಏಳಿಗೆ ಭಾರತದ ಪುನರುತ್ಥಾನ ಕೆ ಸೋಪಾನ" ಎನ್ನುವ ಸ್ವಾಮಿ ವಿವೇಕಾನಂದರ ನುಡಿಯಂತೆ ನಾವಿಂದು ಮಹಿಳೆಯನ್ನ ಅವಳ ಸ್ವಾತಂತ್ರದ ನೆಲೆಯಲ್ಲಿಯೇ ಗೌರವಿಸುವ ಅವಶ್ಯಕತೆ ಇದೆ. ಹನುಮ, ಭೀಮರಿಗೆ ಜನುಮವಿತ್ತಿರುವ ಮಾತೆಗೆ ಮಾತೃತ್ವವೇ ಶಕ್ತಿ. ಸಹನೆ, ಶಾಂತಿ, ತಾಳ್ಮೆ ,ಪ್ರೀತಿ ಇವೆಲ್ಲವನ್ನೂ ನೀಡಬಲ್ಲ ಏಕೈಕ ಜೀವವೆಂದರೆ ಅದು ಹೆಣ್ಣು ಮಾತ್ರ.

ಎಲ್ಲಾ ರಂಗಗಳಲ್ಲೂ ತನ್ನ ಸಾಧನೆಯನ್ನು ಮೆರೆಯುತ್ತಿರುವ ಮಹಿಳೆಗೆ ಬೇಕಾಗಿರುವುದು ಸಹಕಾರವೇ ಹೊರತು ಅವಳ ಬಗ್ಗೆ ಕೇಳಿರಿಮೆಯಲ್ಲ. ಪ್ರಬಂಧ ಮನಸ್ಸು, ಪ್ರಬುದ್ಧ ಸಮಾಜ ಮಹಿಳೆಯರ ಜೀವನ ಮಟ್ಟವನ್ನು ಸುಧಾರಣೆಯೊಂದಿಗೆ ಮನಸ್ಸುಗಳ ಅಂತರಂಗದ ಚಳುವಳಿಯನ್ನು ನಾವಿಂದು ನಡೆಸಬೇಕಾಗಿದೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಮಹಿಳೆಯರ ಬಗ್ಗೆ ಸಮಾಜ ಹೊಂದಿರಬಹುದಾದ ಧೋರಣೆಗಳನ್ನು, ಭಾವನೆಗಳನ್ನು, ಆಕೆಯ ಕುರಿತು ಆಡುವ ಕುಹಕದ ಮಾತುಗಳನ್ನು ಸಾಧ್ಯವಾದಷ್ಟು ನಿಯಂತ್ರಿಸುವ "ಸಂಕಲ್ಪ" ಮನದಲ್ಲೇ ಮಾಡಿಕೊಳ್ಳಬೇಕಾಗಿದೆ. ಹೆಣ್ಣಿನ ಪಾತ್ರದಲ್ಲಿ ಎಷ್ಟೊಂದು ಏರಿಳಿತ ಇದೆ ಎಂದರೆ ಅದನ್ನು ವಿಮರ್ಶಿಸಲು ಕಷ್ಟ ಸಾಧ್ಯ. ಹೆಣ್ಣಿನ ತ್ಯಾಗಕ್ಕಿಂತಲೂ ಮಿಗಿಲಾದದ್ದು ಯಾವುದು ಇಲ್ಲ. ಪ್ರತಿಯೊಬ್ಬ ಮಹಿಳೆ ಅವಳ ದಾರಿಯಲ್ಲಿ ಅವಳು ಯಾವತ್ತೂ ಸರಿ ಇರುತ್ತಾಳೆ.

ಬದುಕನ್ನ ಎದುರಿಸಿ ಗೆಲ್ಲಲು ಹಲವು ಆಯ್ಕೆಗಳನ್ನು ನಮಗೆ ಬದುಕು ಕೊಟ್ಟಿದೆ. ನಿರಾಸೆಯ ಮಡಿಲಿಗೆ ಬೀಳದೆ ಎಚ್ಚರಿಕೆ ಎಲ್ಲೆಯ ಬದುಕನ್ನು ಬದಲಿಸಿಕೊಳ್ಳುವ, ಸಾಧಿಸುವ ತಾಳ್ಮೆ ಸಹನೆಗಳು ಮಹಿಳೆಗೆ ಬರಬೇಕಾಗಿದೆ.

ಕಮಲ ಹ್ಯಾರಿಸ್,ಗೀತ ಗೋಪಿನಾಥ್, ಸ್ವಾತಿ ಮೋಹನ್, ಹಿಮಾದಾಸ್, ಶಿಲ್ಪ ಹೆಗ್ಡೆ, ಕಿರಣ್ ಮಜುಂದರ್ ಶಾ, ಅರುಣಿಮಾ ಸಿಂಹ, ಅವನಿ ಚತುರ್ವೇದಿ, ಸುಧಾ ಮೂರ್ತಿ ಅಂತವರು ನಮಗಿಂದು ಆದರ್ಶರಾಗಿ ಇದ್ದಾರೆ.

ಈ ದಿನದ ಆಚರಣೆ ಅವಶ್ಯಕತೆ ಇಂದು ಎಂದಿಗಿಂತಲೂ ಹೆಚ್ಚಿದೆ. ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಮಹಿಳಾ ಸ್ವಾತಂತ್ರ್ಯ, ಸಮಾನತೆ, ಮಹಿಳಾ ಹಕ್ಕು, ಮಹಿಳಾ ಸುರಕ್ಷಾ ,ಮಹಿಳಾ ದೌರ್ಜನ್ಯ, ಮಹಿಳಾ ವಿಮೋಚನೆ ,ಮಹಿಳಾ ಮೀಸಲಾತಿ, ವರದಕ್ಷಿಣ ವಿರೋಧಿ ಚಳುವಳಿ, ಭೇಟಿ ಬಚಾವ್ ಭೇಟಿ ಪಡಾವ್ ಎಂಬುವ ಹೋರಾಟದಲ್ಲಿ ನಾವಿನ್ನು ಬಂದಿತರಾಗಿರುವುದು ವಿಪರ್ಯಾಸ.

ಎಲ್ಲರನ್ನೂ ಬೆಸೆಯುವಂತ ಹೊಸ ಕನಸೊಂದನ್ನು ಕಟ್ಟಲು "ಒಡಕಿನ" ಭಾವನೆಗಳನ್ನು ಬಿಟ್ಟು "ಒಡಲ" ಭಾವನೆಗಳನ್ನು ಮೈಗೂಡಿಸಿಕೊಳ್ಳೋಣ ಎಂದು ಹೇಳುತ್ತಾ ಮತ್ತೊಮ್ಮೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು ಎಲ್ಲಾ ನಾರಿ ಶಕ್ತಿಗೂ ತಿಳಿಸುತ್ತಾ, ಹೂವು ಹೂವಾಗಿಯೇ ಅರಳುವುದು ಪ್ರಕೃತಿಯ ನಿಯಮ. ಹಾಗಾಗಿ ನಾವು ನಾವಾಗಿಯೇ ಬೆಳೆಯೋಣ ಎಂದು ಹೇಳುತ್ತಾ.....

# ಧರ್ಮ ನಿಸ್ವಾರ್ಥ ಕಲಿಸುತ್ತದೆ

## ಇಲಕಲ್‌ನ ಲಾಲ್ ಹುಸೇನ್ ಕಂದಗಲ್ ಹೇಳಿಕೆ | ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠದಲ್ಲಿ ವಿಶ್ವಧರ್ಮ ಪ್ರವಚನ

■ **ಹಂಪಿ ಟೈಮ್ಸ್ ಹೊಸಪೇಟೆ**

ಲಿಂಗೈಕ್ಯಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ಆಧ್ಯಾತ್ಮಿಕ ರಂಗದಲ್ಲಿ ನಮಗೆಲ್ಲ ಮಾರ್ಗದರ್ಶನ ಮಾಡಿದ ಮಹಾಮಹಿಮರು. ಧರ್ಮವನ್ನು ನಾವು ಉಡುವ ಬಟ್ಟೆ, ಬಿಡುವ ದಾಡಿ, ಮಾತಾಡುವ ಭಾಷೆ, ನಿರ್ಮಿಸುವ ದೇಗುಲ, ಮಸೀದಿ, ಚರ್ಚ್ ಹಾಗೂ ಕೇಸರಿ, ಹಸಿರು, ಬಿಳಿ ಬಣ್ಣಗಳಿಂದ ಗುರುತಿಸುವುದಲ್ಲ. ನಾವು ಪರರಿಗೆ ಮಾಡುವ ಸಹಾಯ ಮತ್ತು ಮಾನವೀಯ ನೆಲೆಗಟ್ಟಿನಲ್ಲಿ ಬದುಕು ನಿರ್ಮಿಸಿಕೊಳ್ಳುವುದೇ ಮಾನವ ಧರ್ಮ ಎಂದು ಇಲಕಲ್‌ನ ಲಾಲ್ ಹುಸೇನ್ ಕಂದಗಲ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದಲ್ಲಿ ಶ್ರೀ ಜಗದ್ಗುರು ಕೊಟ್ಟೂರೇಶ್ವರ ಜಾತ್ರಾಮಹೋತ್ಸವದ 8ನೇ ವರ್ಷ ಸರ್ವಧರ್ಮ ಸಮನ್ವಯ ಮಹಾರಥೋತ್ಸವದಂಗವಾಗಿ ಹಮ್ಮಿಕೊಂಡಿದ್ದ ವಿಶ್ವಧರ್ಮ ಪ್ರವಚನದಲ್ಲಿ ಶನಿವಾರ ಮಾತನಾಡಿದರು. ವಿಶ್ವಗುರು ಬಸವಣ್ಣನವರು, ಪೈಗಂಬರರು ಹಾಗೂ ಅನೇಕ ದಾರ್ಶನಿಕರ ಹೇಳಿದ ಮಾನವೀಯ ಧರ್ಮದ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಸ್ವಾರ್ಥ ಹಾಗೂ ಪಟ್ಟಭದ್ರರಿಂದ ಧರ್ಮದ ವ್ಯಾಖ್ಯಾನ ಕೇಳಿ ತಿಳಿಯುವುದು ಬೇಡ. ಧರ್ಮಗಳ ಮೇಲಾಗುವ ಅಕ್ರಮಣಗಳು ನಿಲ್ಲಬೇಕು. ದಯೆ ಇಲ್ಲದ ಧರ್ಮ ಯಾವುದಯ್ಯ ಎನ್ನುವಂತೆ ದಯೆ ಹಾಗೂ ಕರುಣೆ ಸಂಕುಚಿತಗೊಳ್ಳಬಾರದು.



ಇಂದು ಮಾನವೀಯತೆ ಕರುಣೆ ಕೊರತೆ ಎದುರಾಗಿದೆ. ಕೆಲವರಿಗೆ ಮಾತ್ರ ಸುಖಿನೋ ಭವಂತು ಎನ್ನುವಂತಾಗಿದೆ. ತಾರತಮ್ಯ ಅಳಿಸಿಹಾಕಬೇಕು. ಯಾರ ಕುತಂತ್ರಕ್ಕೂ ಒಳಗಾದೆ ಕೆಡುಕಿಗೆ ಬಲಿಯಾಗಬಾರದು. ಒಳಿತು ಮತ್ತು ಕೇಡುಕಿನ ಅಂತರ ಅರಿಯಲು ಧರ್ಮದಿಂದ ಮಾತ್ರ ಸಾಧ್ಯ. ಧರ್ಮ ನಿಸ್ವಾರ್ಥ ಕಲಿಸುತ್ತದೆ. ಅನಾಥ ಮಗುವಿನ ಎದುರು ನಿಮ್ಮ ಮಗುವನ್ನು ಮುದ್ದಿಸಬಾರದು. ಅನಾಥ ಮಗುವಿನ ಭಾವನೆಗೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಆ ಮಗುವಿಗೆ ಏನೂ ಕೊಡದಿದ್ದರೂ ಪ್ರೀತಿಯಿಂದ ತಲೆ ಸವರಿದರೆ ಪುಣ್ಯ ಲಭಿಸುತ್ತದೆ. ಯಾವ ಜಾತಿ, ಧರ್ಮ ನೋಡಬಾರದು. ಮಾನವೀಯತೆಯ ನೆಲೆಗಟ್ಟಿನಿಂದ ಎಲ್ಲರನ್ನು ನೋಡಬೇಕು. ಸ್ವಾರ್ಥ ಹೆಚ್ಚಾಗಿರುವುದರಿಂದ ಹತ್ಯೆಗಳು ನಡೆಯುತ್ತಿವೆ.

ಜಗದ್ಗುರು ಕೊಟ್ಟೂರು ಮಠ ಬಸವಣ್ಣನವರ ಐಕ್ಯತೆಯ ಸಂದೇಶ ಸಾರುತ್ತಿದೆ. ಜಾತಿ ಬದಿಗೊತ್ತಿ ನಾನೊಬ್ಬ ಮನುಷ್ಯ ಭಾರತೀಯ ಎಂದೇಳಿಕೊಳ್ಳಬೇಕು. ಬಸವಣ್ಣನ ನಾಡಿನಲ್ಲಿ ಜಾತಿ ವ್ಯವಸ್ಥೆ ಎಂದಿಗೂ ಸಲ್ಲದು. ಮಾನವ ಮನಸ್ಸುಗಳ ಜೋಡಣೆಗಾಗಿ ನಡೆಯುತ್ತಿರುವ ವಿಶ್ವಧರ್ಮ ಪ್ರವಚನ ಹಾಗೂ ಸರ್ವಧರ್ಮ ಸಮನ್ವಯ ರಥೋತ್ಸವ ನಾಡಿಗೆ ಮಾದರಿ ಎಂದರು.

ಶ್ರೀಮಠದ ಜಗದ್ಗುರು ಬಸವಲಿಂಗ ಮಹಾಸ್ವಾಮಿಗಳೂ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ವಿಶ್ವಧರ್ಮದ ಸಾರವನ್ನು ಪ್ರತಿಯೊಬ್ಬರು ಅರಿಯಬೇಕೆಂದು ಶ್ರೀಮಠದಿಂದ ಪ್ರವಚನ ಆರಂಭಿಸಲಾಗಿದೆ. ಮನುಷ್ಯ ಮನುಷ್ಯರನ್ನು ದ್ವೇಶಿಸದೇ ಪ್ರೀತಿಸುವಂತಾಗಬೇಕು. ಪರಸ್ಪರರು ಸ್ನೇಹ ಪ್ರೀತಿಯಿಂದ ಮಾತನಾಡಿದಾಗ ಸರ್ವಜನಾಂಗದ ಶಾಂತಿಯ ತೋಟವನ್ನು ನಮ್ಮ ಕಣ್ಣುಗಳು ಕಾಣಲು ಸಾಧ್ಯ ಎಂದರು.

ಸಂಸದ ರಾಜಶೇಖರ್ ಹಿಟ್ನಾಳ್, ಬಳ್ಳಾರಿಯ ರೆವರೆಂಡ್ ಫಾದರ್ ಐವನ್ ಫಿಂಟೋ ಮಾತನಾಡಿದರು. ಸಮಾಜ ಸೇವಕ ದೀಪಕ್ ಸಿಂಗ್, ಹುಡಾ ಮಾಜಿ ಅಧ್ಯಕ್ಷ ಆರ್.ಕೊಟ್ರೇಶ್, ಸಾಹಿತಿ ಡಾ.ಕೆ.ರವೀಂದ್ರನಾಥ ಎಂ.ಎಂ.ಶಿವಪ್ರಕಾಶ, ಕೆ.ತಿಪ್ಪೇಸ್ವಾಮಿ, ಸಮಾಜ ಮುಖಂಡರಿದ್ದರು. ನಿವೃತ್ತ ಪಾಧ್ಯಾಪಕ ಡಾ.ಎಚ್.ಎಂ.ಚಂದ್ರಶೇಖರಶಾಸ್ತ್ರಿ ನಿರ್ವಹಿಸಿದರು.








---

# ಮಕ್ಕಳ ಸಂಸ್ಕಾರದಲ್ಲಡಗಿದೆ ತಾಯಿ ಪಾತ್ರ

## ಪ್ರಾಚಾರ್ಯರು ನಿರ್ಮಲ ಶಿವನಗುತ್ತಿ ಅಭಿಮತ | ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ




■ **ಹಂಪಿ ಟೈಮ್ಸ್ ಕೊಟ್ಟೂರು**

ಮಕ್ಕಳಿಗೆ ಶಿಕ್ಷಣದ ಜೊತೆಗೆ ಮನೆಯಲ್ಲಿ ಉತ್ತಮ ಸಂಸ್ಕಾರ ಕಲಿಸುವಂತಹ ದೊಡ್ಡ ಜವಾಬ್ದಾರಿ ತಾಯಿದ್ದಾಗಿದೆ ಇದರೊಟ್ಟಿಗೆ ಕುಟುಂಬ ನಿರ್ವಾಹಣೆಯಲ್ಲಿಯೂ ಮಹಿಳೆಯರ ಪಾತ್ರ ಪ್ರಸ್ತುತ ಅತ್ಯಂತ ಮುಖ್ಯವಾಗಿದೆ ಎಂದು ಪ್ರಾಚಾರ್ಯರು ನಿರ್ಮಲ ಶಿವನಗುತ್ತಿ ಹೇಳಿದರು.

ಕೊಟ್ಟೂರು ತಾಲೂಕಿನ ನಿಂಬಳಗೆರೆ ಶ್ರೀ ಕಲ್ಲೇಶ್ವರ ನರ್ಸರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶ್ರೀ ಕಲ್ಲೇಶ್ವರ ಸ್ವಾಮಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಸ್.ವೀರಣ್ಣ ಕಾರ್ಯ ಕ್ರಮಕ್ಕೆ ಸ್ವಾಗತಿಸುತ್ತಾ,ಮಹಿಳಾ ಸಬಲೀಕ ರಣಕ್ಕೆ ವಿಶ್ವಸಂಸ್ಥೆಯೇ ತೀರ್ಮಾ ನಿಸಿದ್ದು, ಭಾರತದಲ್ಲೂ ಮಹಿಳೆಯರ ಸಮಾನತೆ ಹಾಗೂ ಸಬಲೀಕರಣಕ್ಕಾಗಿ ವಚನಕಾರರನ್ನು ಮೊದಲುಗೊಂಡು ಅನೇಕ ದಾರ್ಶನಿಕರು ಶ್ರಮಿಸಿದ್ದಾರೆ.ಹಾಗೂ ಕಾನೂನಾತ್ಮಕವಾಗಿ ಸಂವಿಧಾನ ದಲ್ಲೂ ಮಹಿಳಾ ಸಮಾನತೆಗೆ ಅನೇಕ ಅಂಶಗಳನ್ನು ಸೇರಿಸಲಾಗಿದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಶಿವಲೀಲಾ ಮುಖ್ಯ ಶಿಕ್ಷಕಿ ಇವರು ವಹಿಸಿದ್ದರು. ಪ್ರಾಸ್ತವಿಕವಾಗಿ ಜಿ. ಪ್ರಭಾವತಿ ಅವರು ಮಾತನಾಡಿದರು. ಈ ದಿನದ ವಿಶೇಷತೆಗಾಗಿ ಮಹಿಳಾ ಪೋಷಕರಿಗೆ ಕ್ರೀಡಾಕೂಟಗಳನ್ನು ಆಯೋಜಿಸಿದ್ದು, ಸ್ಪರ್ಧೆಯಲ್ಲಿ ವಿಜೇತರಾದ ತಾಯಂದಿರಿಗೆ ಬಹುಮಾನ ವಿತರಿಸಲಾಯಿತು. ಕ್ರೀಡೆಯಲ್ಲಿ ಭಾಗವಹಿಸಿದ ಖುಷಿಗೆ ಪೋಷಕರಾದ ಶೋಭಾ ಬಾಲ್ಯದ ಆಟದ ದಿನಗಳನ್ನು ಸ್ಮರಿಸುತ್ತಾ,ತಮಗಾದ ಆನಂದವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕೆ. ನಾಗರಾಜ್ ಶಿಕ್ಷಕರು ನಿರ್ವಹಿಸಿದರು, ಪ್ರಾರ್ಥನೆಯನ್ನು ಕುಮಾರಿ ಎಸ್.ಎನ್. ಲಾವಣ್ಯ ಸಂಗಡಿಗರು ನಿರ್ವಹಿಸಿದರು. ಹಾಗೂ ವಂದನಾರ್ಪಣೆಯನ್ನು ಪರಶುರಾಮ್ ಶಿಕ್ಷಕರು ನಿರ್ವಹಿಸಿದರು, ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಮಹಿಳಾ ಶಿಕ್ಷಕಿಯರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

---

# ಬಂಡಿಯ ಎರಡು ಚಕ್ರಗಳಿದ್ದಂತೆ ಮಹಿಳೆ-ಪುರುಷ

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ ಅಭಿಮತ | ಮಹಿಳಾ ದಿನಾಚರಣೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳೆ ಮತ್ತು ಪುರುಷ ಇಬ್ಬರು ಬಂಡಿಯ ಎರಡು ಚಕ್ರಗಳಿದ್ದಂತೆ. ಇಬ್ಬರೂ ಜೊತೆಗೂಡಿ ಸಮನಾಗಿ ಚಲಿಸಿದಾಗ ಮಾತ್ರ ನಿರ್ದಿಷ್ಟ ಗುರಿ ತಲುಪಲು ಸಾಧ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾ ವಕೀಲರ ಸಂಘ ಮತ್ತು ರೀಡ್ಸ್ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಶನಿವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜದಲ್ಲಿ ಪುರುಷನ ಸಾಧನೆಯ ಹಿಂದೆ ಮಹಿಳೆ ಇರುವ ಹಾಗೆ ಅಭಿವೃದ್ಧಿ ಹೊಂದುತ್ತಿರುವ ಮಹಿಳೆ ಹಿಂದೆಯೂ ಸಹ ಪುರುಷ ಇರುತ್ತಾನೆ. ಹಾಗಾಗಿ ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಇಬ್ಬರೂ ಸಮಾಜದ ಕಣ್ಣುಗಳಿದ್ದಂತೆ ಎಂದು ಅವರು ಅಭಿಮತ ವ್ಯಕ್ತಪಡಿಸಿದರು.

ಕಾನೂನಿನಲ್ಲಿ ಮಹಿಳೆಯರಿಗಾಗಿ ಏನೇನು ಸೌಲಭ್ಯಗಳಿವೆ ಎಂಬುದು ಅರಿಯಬೇಕು. ಸಮಾಜದಲ್ಲಿ ಬಾಲ್ಯವಿವಾಹ, ವರದಕ್ಷಿಣೆ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ವಿಚ್ಛೇದನ, ಮಾನಸಿಕ ಹಾಗೂ ದೈಹಿಕ ಹಿಂಸೆ ಮುಂತಾದ ಹಲವಾರು ಸಮಸ್ಯೆಗಳಿಗೆ ಕಾಯ್ದೆ-ಕಾನೂನುಗಳಿದ್ದು, ಮಹಿಳೆಯರು ಇವುಗಳನ್ನು ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಮಹಿಳೆಯು ಮಾತೃ ಸ್ವರೂಪಿ. ತನ್ನ ಜೀವನದಲ್ಲಿ ಎಲ್ಲಾ ಹಂತದ ಕಷ್ಟಗಳನ್ನು ಸಹನೆಯಿಂದ ದಾಟಿಕೊಂಡು ಮುನ್ನಡೆಯುತ್ತಾಳೆ. ಈ ಹಿಂದೆ ಮಹಿಳೆಯು ಕೇವಲ ಅಡುಗೆ ಕೋಣೆಗೆ ಮಾತ್ರ ಸೀಮಿತವಾಗುತ್ತಿದ್ದಳು. ಆದರೆ ಪ್ರಸ್ತುತ ಸಮಾಜದ ಎಲ್ಲಾ ರಂಗಗಳಲ್ಲಿ ಪುರುಷನ ಸಮಾನಾಗಿ ಮಹಿಳೆಯರು ಅಭಿವೃದ್ಧಿ ಹೊಂದಿದ್ದಾರೆ ಎಂದರು.

ಮಹಿಳೆಯರು ತಮ್ಮಲ್ಲಿನ ಕೀಳರಿಮೆ ಬಿಡಬೇಕು. ಧೃತಿಗೇಡಬಾರದು. ಏನೇ ಸಮಸ್ಯೆ ಬಂದರೂ ತಾವು ಅಂದುಕೊಂಡ ಗುರಿ ತಲುಪಿ ಗೆಲುವಿನ ಹಾದಿ ಕಂಡುಕೊಳ್ಳಬೇಕು ಎಂದು ಕರೆ ನೀಡಿದರು.

ನ್ಯಾಯಾಧೀಶರು, ವಕೀಲರ ಸಂಘದ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ನ್ಯಾಯಾಲಯದ ಸಿಬ್ಬಂದಿ ವರ್ಗ, ರೀಡ್ಸ್ ಸಂಸ್ಥೆಯ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

---


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ | ಸಂವತ್ಸರ: ಕ್ರೋಧಿ

**09-03-2025 – ಭಾನುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಸೌಭಾಗ್ಯ |
| ಕರಣ | : ಗರಜ |
| ಸೂರ್ಯೋದಯ | : 06:42:36 |
| ಸೂರ್ಯಾಸ್ತ | : 18:32:27 |
| ರಾಹು ಕಾಲ | : 17:04–18:32 |
| ಯಮಘಂಡ ಕಾಲ | : 12:38–14:06 |
| ಗುಳಿಕ ಕಾಲ | : 15:35–17:04 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 07-03-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1604.70 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9899 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 28.236 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1585.73 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2173 ಕ್ಯುಸೆಕ್ |
| ಸಾಮರ್ಥ್ಯ | 7.814 ಟಿಎಂಸಿ |

---

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ಕೇವಲ ಬರಿ 12 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಸಮಾಜ ವಿಜ್ಞಾನ

ನಿನ್ನ ಏಳಿಗೆಗೆ ನೀನೆ ಶಿಲ್ಪಿ

## 10ನೇ ತರಗತಿ ಸಮಾಜ ವಿಜ್ಞಾನ ಭೂಗೋಳಶಾಸ್ತ್ರ ಬಹುನಿರೀಕ್ಷಿತ ಪ್ರಶ್ನೋತ್ತೋರಗಳು

**1) ಹಿಮಾಲಯದ ಮಹತ್ವ ತಿಳಿಸಿ**

ಉತ್ತರ:– * ಭಾರತಕ್ಕೆ ರಕ್ಷಣೆಯ ಗೋಡೆಯಂತಿದೆ * ಉತ್ತರ ಏಷ್ಯಾದಿಂದ ಬೀಸುವ ಶೀತ ಗಾಳಿಯನ್ನು ತಡೆಯುತ್ತದೆ. * ನದಿಗಳ ಉಗಮ ಸ್ಥಾನವಾಗಿದೆ. * ಖನಿಜ ಸಂಪನ್ಮೂಲಗಳ ಆಗರವಾಗಿದೆ * ಜಲ ವಿದ್ಯುತ್ ಶಕ್ತಿ ಉತ್ಪಾದನೆಗೆ ಅನುಕೂಲವಾಗಿದೆ * ವಿಶಾಲ ಮೈದಾನಗಳನ್ನು ನಿರ್ಮಿಸಿದೆ. * ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಆಶ್ರಯ ತಾಣವಾಗಿದೆ

**2) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ**

ಉತ್ತರ:– **ಪೂರ್ವ ಘಟ್ಟ:–** * ಹೆಚ್ಚು ಎತ್ತರವಾಗಿಲ್ಲ * ನಿರಂತರವಾಗಿಲ್ಲ * ದಖನ್ ಪ್ರಸ್ಥಭೂಮಿಯ ಪೂರ್ವದಲ್ಲಿವೆ * ಅರ್ಮಕೊಂಡ ಎತ್ತರವಾದ ಶಿಖರಗಳು

**ಪಶ್ಚಿಮ ಘಟ್ಟ :** * ಹೆಚ್ಚು ಎತ್ತರವಾಗಿವೆ * ನಿರಂತರವಾಗಿವೆ, * ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿವೆ * ಆನೈಮುಡಿ ಎತ್ತರವಾದ ಶಿಖರ

**3) ಭಾರತದ ವ್ಯವಸಾಯ ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ ಚರ್ಚಿಸಿ.**

ಉತ್ತರ:– * ಭಾರತದ ಜನತೆಯ ಪ್ರಧಾನ ಉದ್ಯೋಗ ಕೃಷಿ, * ಮಾನ್ಸೂನ್ ಮಾರುತಗಳು ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ, * ಮಳೆ ವಿಫಲವಾದರೆ ಬರಗಾಲ ಬರುತ್ತದೆ. * ಮಳೆ ಹೆಚ್ಚಾದರೆ ಪ್ರವಾಹ ಉಂಟಾಗಿ ಬೆಳೆ ನಾಶವಾಗುತ್ತದೆ ಆದ್ದರಿಂದ ಭಾರತದ ವ್ಯವಸಾಯ ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ ಎನ್ನುವರು

**4) ಮಣ್ಣಿನ ಸವೆತಕ್ಕೆ ಕಾರಣಗಳು ಯಾವುವು?**

ಉತ್ತರ:– * ಅರಣ್ಯ ನಾಶ * ಹೆಚ್ಚು ಮೇಯಿಸುವುದು * ಅವೈಜ್ಞಾನಿಕ ಬೇಸಾಯ, * ಅಧಿಕ ನೀರಾವರಿ ಬಳಕೆ

**5) ಮಣ್ಣಿನ ಸವೆತದ ಪರಿಣಾಮಗಳನ್ನು ತಿಳಿಸಿ?**

ಉತ್ತರ:– * ಪ್ರವಾಹ ಉಂಟಾಗುವುದು, * ನದಿ ಪಾತ್ರ ಬದಲಾವಣೆ, * ಜಲಾಶಯಗಳಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗುವುದು, * ವ್ಯವಸಾಯದ ಮೇಲೆ ದುಷ್ಪರಿಣಾಮ

**6) ಮಣ್ಣಿನ ಸಂರಕ್ಷಣೆಯ ವಿಧಾನಗಳು ಯಾವುವು?**

ಉತ್ತರ:– * ಇಳಿಜಾರಿಗೆ ಅಡ್ಡಲಾಗಿ ಉಳಮೆ * ಅಡ್ಡ ಬದುಗಳ ನಿರ್ಮಾಣ * ಅತಿಯಾಗಿ ಮೇಯಿಸುವುದನ್ನುನಿಯಂತ್ರಿಸುವುದು. * ಹಂತ ಹಂತ ವ್ಯವಸಾಯ ಕ್ಷೇತ್ರ ನಿರ್ಮಾಣ * ಅರಣ್ಯ ನಾಶ ತಡೆಗಟ್ಟುವುದು. * ಅರಣ್ಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು. * ನೀರಿನ ಯೋಜಿತ ಬಳಕೆ, ಚೆಕ್ ಡ್ಯಾಮ್ ನಿರ್ಮಾಣ

**7) ಅರಣ್ಯ ನಾಶಕ್ಕೆ ಕಾರಣಗಳನ್ನು ಪಟ್ಟಿ ಮಾಡಿ**

ಉತ್ತರ:– * ವ್ಯವಸಾಯದ ವಿಸ್ತರಣೆ, * ರಸ್ತೆಗಳು ಮತ್ತು ರೈಲು ಮಾರ್ಗಗಳು ನಿರ್ಮಾಣ * ನೀರಾವರಿ ಯೋಜನೆಗಳ ನಿರ್ಮಾಣ * ಕಾಡ್ಗಿಚ್ಚು. * ಗಣಿಗಾರಿಕೆ. * ಹೈನುಗಾರಿಕೆ

**8) ಅರಣ್ಯವನ್ನು ಹೇಗೆ ರಕ್ಷಿಸಬೇಕು?**

ಉತ್ತರ:– ಘರ್ಷಿತ ಮರಗಳನ್ನು ತೆಗೆಯುವುದು. * ಮರಗಳಿಗೆ ತಗಲುವ ರೋಗ ನಿಯಂತ್ರಣ. * ಸಸಿ ನೆಡುವುದು, * ಬೀಜ ಹರಡುವುದು. * ಮರ ಕಡಿಯುವುದನ್ನು ನಿಯಂತ್ರಿಸು ವುದು. * ಪ್ರಾಣಿಗಳ ಮೇಯಿಸುವಿಕೆ ನಿಯಂತ್ರಣ. * ಸಾರ್ವಜನಿಕ ಮರ ನೆಡಲು ಪ್ರೋತ್ಸಾಹ

**9) ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳು ಯಾವುವು ?**

ಉತ್ತರ:– * ನೀರಾವರಿ ಸೌಲಭ್ಯ ಒದಗಿಸುವುದು * ಜಲವಿದ್ಯುತ್ ಶಕ್ತಿ ಉತ್ಪಾದನೆ. * ಪ್ರವಾಹ ನಿಯಂತ್ರಣ. * ನೌಕಾಯಾನ ಸೌಲಭ್ಯ * ಗೃಹಬಳಕೆ * ಕೈಗಾರಿಕೆಗಳಿಗೆ ನೀರುಒದಗಿಸುವುದು * ಮಣ್ಣಿನ ಸವಕಳಿಯನ್ನು ತಡೆಯುವುದು

**10) ಭಾರತದಲ್ಲಿನ ಭೂ ಬಳಕೆಯ ವಿಧಗಳು ಯಾವುವು?**

ಉತ್ತರ:– 1 ನಿವ್ವಳ ಸಾಗುವಳಿ ಕ್ಷೇತ್ರ. 2.ಅರಣ್ಯ ಭೂಮಿ. 3.ವ್ಯವಸಾಯೇತರ ಭೂ ಬಳಕೆ. 4.ಬೀಳು ಭೂಮಿ. 5.ಹುಲ್ಲುಗಾವಲ 6 ಬಳಕೆಯಾಗದ ವ್ಯವಸಾಯ ಯೋಗ್ಯಭೂಮಿ

**11) ನಮ್ಮ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ವಿವರಿಸಿ?**

ಉತ್ತರ:– 1. ಕೃಷಿಯು ಭಾರತೀಯರ ಮುಖ್ಯ ಉದ್ಯೋಗವಾಗಿದೆ. 2. ಜನರಿಗೆ ಉದ್ಯೋಗವನ್ನು ನೀಡಿದೆ. 3. ಜನರ ತಲಾ ಆದಾಯ ಹೆಚ್ಚಿಸಿ, ರಾಷ್ಟ್ರೀಯ ಆದಾಯ ಹಚ್ಚಳಕ್ಕೆ ಕಾರಣವಾಗಿದೆ 4. ಜನರಿಗೆ ಆಹಾರವನ್ನು ಪೂರೈಸುತ್ತದೆ. 5. ಕೃಷಿಯು ಕೈಗಾರಿಕೆಗಳಿಗೆ ಕಚ್ಚಾ ವಸ್ತುವನ್ನು ಒದಗಿಸುತ್ತದೆ. 6. ಪರೋಕ್ಷವಾಗಿ ಅನೇಕ ಕೈಗಾರಿಕೆಗಳನ್ನು ಸಹ ಪೋಷಿಸುತ್ತದೆ. 7. ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸುತ್ತದ

**12) ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ನಿಮ್ಮ ಸಲಹೆಗಳೇನು?**

ಉತ್ತರ:– * ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು * ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ, * ಬದಲಿ ಸಂಪನ್ಮೂಲಗಳನ್ನು ಬಳಸುವುದು, * ಅಸಾಂಪ್ರದಾಯಕ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ, *ಶಕ್ತಿ ಸಂಪನ್ಮೂಲಗಳ ಮಿತ ಬಳಕೆ, * ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು.

**13) ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?**

**ಉತ್ತರ:– * ಕಚ್ಚಾ ವಸ್ತುಗಳ ಲಭ್ಯತೆ,* ಶಕ್ತಿ ಸಂಪನ್ಮೂಲ ಲಭ್ಯತೆ,** ? * ಕಚ್ಚಾ ವಸ್ತುಗಳ ಲಭ್ಯತೆ,* ಶಕ್ತಿ ಸಂಪನ್ಮೂಲ ಲಭ್ಯತೆ,* ಬಂಡವಾಳದ ಲಭ್ಯತೆ * ಕಾರ್ಮಿಕರ ಪೂರೈಕೆ * ಸಾರಿಗೆ ಮತ್ತು ಸಂಪರ್ಕ * ಸರಕಾರದ ನೀತಿಗಳು

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ** ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ